Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೯–೦–೦.

ಸಂಪುಟ ೨೮ | ತಾರೀಕು ೨೪–೨–೧೯೬೦ನೇ ಶುಕ್ರವಾರ | ಸಂಚಿಕೆ ೭೯

ವ್ಯಕ್ತಿ ಪರಿಚಯ!

ದಿ. ಬ್ರು. ಮೊದಲಿಯೂರ್‌ರವರು

ಲೇ:—'ವಿರಾಟ್'.

ಕೊಡಗಿನ ರಾಜರನಂತರ ಈ ನೂರಹದಿನೈದು ವರ್ಷಗಳ ಅವಧಿಯಲ್ಲಿ ಅದೆಷ್ಟು ಚೀಫ್ ಕಮಿಷನರುಗಳು ಬಂದು ಆಳಿ ಹೋಗಲಿಲ್ಲ! ಕೆಲವರ ಹೆಸರೇ ಜನಕ್ಕೆ ತಿಳಿದಿರಲಿಲ್ಲ; ಕೆಲವರ ಮುಖವನ್ನೇ ಜನತೆ ಕಂಡಿರಲಿಲ್ಲ; ನುತ್ತು ಕೆಲವರು ಅಗೋಚರ ವ್ಯಕ್ತಿಗಳಾಗಿ ಇದ್ದೂ ಇಲ್ಲದಿದ್ದವರಂತೆ ಬಂದು ಹೋಗುತಿದ್ದರು. ಆದರೆ ಅದು ಸಾಮ್ರಾಜ್ಯವಾದದ ಬ್ರಿಟಿಷರ ಅಳ್ವಿಕೆಯ ಕಾಲ. ಈಗ ಎಲ್ಲೆಲ್ಲೂ ನವ ಜಾಗೃತಿಯು ಅಂಕುರಿಸಿದೆ. ಜನರೂ ಅಂದಿನಂತೆ ಇಂದು ಇಲ್ಲ. ಪ್ರಜಾಪ್ರಭುತ್ವದ ಕಾಲ ಆದರೆ ಕೊಡಗಿನಲ್ಲಿ ಹಳೆಯ ಸಂಪ್ರದಾಯವು ಇಂದಿಗೂ ಇದೆಯೆ? ಕೇಂದ್ರದಿಂದ ಪ್ರಜಾಪ್ರತಿನಿಧಿಗಳು ರಾಜ್ಯಭಾರವನ್ನು ಮಾಡುವದರಿಂದ ಇಂದು ಕೊಡಗಿನಲ್ಲೂ ಪ್ರಜಾ ಸರ್ಕಾರವೇ ಇದೆಯೆಂದು ಹೇಳಬಹುದಾದರೂ ಚೀಫ್ ಕಮಿಷನರರು ಕೇವಲ ಕೇಂದ್ರ ಮಂತ್ರಿಮಂಡಲದ ಒಂದು ಪ್ರತಿನಿಧಿಯಂತೆ ಮಾತ್ರವಲ್ಲದೆ ಹಿಂದಿನ ಸರ್ವಾಧಿಕಾರ ಇಂದು ಅವರಿಗಿಲ್ಲ. ಮತ್ತು ಕೇವಲ ತಾಲ್ಲೂಕಿನಷ್ಟಾ ದೊಡ್ಡದಿಲ್ಲದ ಕೊಡಗಿಗೆ ಮಂತ್ರಿಮಂಡಲದ ಅನಿವಾರ್ಯತೆಯು ಹೇಗೂ ಇಲ್ಲ. ನಮ್ಮ ಕೆಲವು ಮುಂದಾಳುಗಳು ಅಧಿಕಾರ ಆಶಯವನ್ನಿಟ್ಟುಕೊಂಡಿದ್ದರೆ ಅದು ಕೊಡಗಿಗೆ ಕೇವಲ ಅಸಾಧ್ಯದ ಮಾತು. ಇಷ್ಟು ಚಿಕ್ಕ ಸ್ಥಳದಲ್ಲಿ ಕೆಲವು ಪ್ರಜಾಪ್ರತಿನಿಧಿಗಳನ್ನು ಆಳಲು ಬಿಟ್ಟರೆ ಇನ್ನಷ್ಟು 'ಬಿರಾಸಾಗಿ ಯಾದವೀ ಕಲಹವಾದಿಂತಲ್ಲದೆ ಬೇರೇನೂ ಇಲ್ಲ.

ಶ್ರೀ ಮೊದಲಿಯೂರ್‌ರವರನ್ನು ಸಾಧಾರಣವಾಗಿ ಮತ್ತು ಸ್ಥೂಲವಾಗಿ ತಿಳಿದಿದ್ದ ನಾನು ಅವರನ್ನು ಆದರ್ಶ ಅಧಿಕಾರಿಗಳೆಂದು ಹೇಳಲು ಬಯಸುತ್ತೇನೆ. ಅವರಿಂದ ತಕ್ಕ ಪುರಸ್ಕಾರವನ್ನು ಹೊಂದದೇ ಇದ್ದ ನಿರಾಶಾವಾದಿಗಳ ತಂಡವು ನನ್ನ ಈ ಮಾತಿಗೆ ಒಪ್ಪಲಾರದೆಂದು ನನಗೆ ನಂಬಿಕೆಯಿದೆ. ಆದರೆ ಜನಾಭಿಪ್ರಾಯವು ಒಂದಾಗಿದ ತರಗೆಲೆಯಂತೆ ಆಶ್ರಿತ್ತ ಗಾಳಿ ಬೀಸಿದ ಕಡೆ ಓಡಾಡಬಹುದಾದ ಮಾತಿನ ಮಲ್ಲತನವಲ್ಲದೆ ಬೇರೇನೂ ಅಲ್ಲ. ಜನಾಭಿಪ್ರಾಯದಲ್ಲಿ ಸತ್ಯದ ಅಂಶವು ಇರುವುದು ಕೇವಲ ಅಪರೂಪ. ಶ್ರೀ ಮೊದಲಿಯೂರ್‌ರವರು ಬರೇ ಎರಡು ವರ್ಷಕ್ಕೆ ಹಿಂದೆ ಕೊಡಗಿಗೆ ಬಂದರು. ಅವರು ಬಂದಾಗ ಕೊಡಗಿನ ಸ್ಥಿತಿ ಹೇಗಿತ್ತು ಎಂಬುದು ಬೇರೆ ಹೇಳಬೇಕಾಗಿಲ್ಲ. ನಮ್ಮವರೇ ಆಳುತಿದ್ದರೆಂಬುದು ಸಹಜ! ಕಪ್ಪು ಸಂತೆ, ಲಂಚ, ಅಧಿಕಾರಿಗಳ ಆಟೋಪ, ಅವರು ನಡೆಯುತಿದ್ದ ಅವ್ಯವಸ್ಥೆಯ ಕೆಲಸ ಮೊದಲಾದವು ಆಸನೂನರಿಂತಿಯಲ್ಲಿ ನಡೆಯುತಿತ್ತು. ಗ್ರಾಮಾಭಿವೃದ್ಧಿ, ದಲಿತ ಜನಾಭಿವೃದ್ಧಿಗಳ ಮಾತೇ ಆಗ ಇರಲಿಲ್ಲ. ದೇಶದಲ್ಲಿ ಇದ್ದ ಎರಡು ಪಂಗಡಗಳು ಕಾಲೇಜಿನ ವಿಷಯದಲ್ಲಿ ಹೊಡೆದಾಡಿಕೊಂಡಿದ್ದಂತೆ ಎಲ್ಲಾ ವಿಷಯಗಳಲ್ಲೂ ಕಾದಾಡುತಿದ್ದುದರಿಂದ ಆಗ ಇದ್ದ ಚೀಫ್ ಕಮಿಷನರರು ಎರಡು ಕಡೆಯಿಂದಲೂ ತೆಗಳಿಸಿಕೊಳ್ಳದ ರೀತಿಯಲ್ಲಿ ತನ್ನ ಕೆಲಸವನ್ನು ಸುಧಾರಿಸಿಕೊಂಡು ಹೋಗುತಿದ್ದರು.

ಶ್ರೀ ಮೊದಲಿಯೂರ್‌ರವರು ಬ್ರಿಟಿಷರ ಕಾಲದ ನಮ್ಮ ಸೇವಕರಾಗಿದ್ದವರು. ಅವರು "ದಿನಾನ್‌ಬಹದ್ದೂರ್" ಎಂಬ ಬಿರುದನ್ನು ಗಳಿಸಿದವರು. ಮಡಿಕೇರಿಯಲ್ಲಿ ಕಾಂ|| ಮಂತ್ರಿಮಂಡಲ ಬಂದಾಗ "ಹೋಂ" ಇಲಾಖೆಯಲ್ಲಿ ನೇಮಿಸಲ್ಪಟ್ಟರು. ಇದರಿಂದ ಅವರು ಉತ್ತಮ ಕೆಲಸಗಾರರೆಂದು ಹೇಳಬೇ ಸಾಧ್ಯವಿಲ್ಲ. ಕೊಡಗಿಗೆ ಬಂದಾಗ ಇವರು ಹಳೆಯ ಬ್ರಿಟಿಷರ ಕಾಲದ ಬಂಡಾತೋಡಿನ ಮನುಷ್ಯರಂತೆ ತೋರಲಿಲ್ಲ ಬದಲಾಗಿ ನೆಹರೂ ಸರಕಾರದ ಯೋಗ್ಯ ಮತ್ತು ದಕ್ಷ ಕೆಲಸಗಾರರೊಬ್ಬರೆಂದು ತೋರಿತು. ತನ್ನ ಅಳ್ವಿಕೆಯ ನೀತಿಯನ್ನು ಕಾಲಕ್ಕನುಗುಣವಾಗಿ ಮಾರ್ಪಡಿಸುವ ಶಕ್ತಿ ಅವರಲ್ಲಿ ಅಂತೆಯೇ ತೋರಿತು. ಕೊಡಗಿಗೆ ಅಷ್ಟರವರೆಗೆ ಸ್ವತಂತ್ರ ರಾಜ್ಯಭಾರದ ಬದಲಾವಣೆಯು ಗೋಚರವಾಗಿರಲಿಲ್ಲ. ಇವರು ಬಂದ ಕೂಡಲೇ ಅನೇಕ ಹೆಗ್ಗಣಗಳಂತೆ ಇದ್ದ ಮತ್ತು ಕರ್ತವ್ಯಶೀಲರಾಗಿರದಿದ್ದ ಸರಕಾರಿ ಉದ್ಯೋಗಸ್ಥರನ್ನೂ ಗುಮಾಸ್ತರನ್ನೂ ಹೊರ ಕಳುಹಿಸಿದರು. ಇನ್ನೂ ಕೆಲವರು ಅಂಥವರು ಉಳಿದಿದ್ದರೂ ಅವರ ದೃಷ್ಟಿಗೆ ಸಿಕ್ಕದ ಕಾರಣದಿಂದಾಗಿದೆ. ಸಿಕ್ಕಿದ್ದರೆ ದೇಶದ ಹಿತದೃಷ್ಟಿಯಿಂದ ಅವರನ್ನು ಹೊರತಳ್ಳಲು ಹಿಂಜರಿಯುವವರಲ್ಲ. ಇದಕ್ಕೆ ಸಾಮಾನ್ಯ ಧೈರ್ಯವೇನೂ ಸಾಲದು. ತಾನು ಪರಿಶುದ್ಧನಾಗಿದ್ದರೆ ಮಾತ್ರ ಇಂಥಾ ಕೆಲಸಗಳನ್ನು ಮಾಡಬಹುದಲ್ಲದೆ ಎಲ್ಲರಿಂದಲೂ ಸಾಧ್ಯವಾಗದು.

ಎಷ್ಟು ಜನ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಕೆಲಸವನ್ನು ಮಾಡಿದರೂ ಮಾಡದೆ ಇದ್ದರೂ ಪ್ರಯಾಣಭತ್ಯೆಯನ್ನು ವರ್ಷಕ್ಕೆ ಸಾವಿರಾರು ರೂಪಾಯಿಗಟ್ಟಿಯಲ್ಲಿ ತುಂಬಿಕೊಳ್ಳುತಿದ್ದರು? ಶ್ರೀ. ಮೊದಲಿಯೂರ್‌ರವರು ಬಂದ ಮೇಲೆ ಇಂಥಾ ಅಧಿಕಾರಿಗಳಿಗೆ ಅವರ ಕಠಿಣ ಅಳ್ವಿಕೆ ದೆಸೆಯಿಂದ ಬಂದ ಸಂಕಟ ಅವರಿಗೆ ಮಾತ್ರ ಗೊತ್ತಲ್ಲದೆ ಜನಕ್ಕೇನು ಗೊತ್ತು? ಆಫೀಸುಗಳಲ್ಲಿ ಲೇಖನಿ ಪೆನ್ಸಿಲುಂಕಾಗದ, ಸ್ಟ್ಯಾಂಪು ಇತ್ಯಾದಿಗಳು ರಾಶಿಗಟ್ಟಿಸಿಕಾಣದಿದ್ದರೆ ಇಂದಿನ ಜನತಾ ಸರಕಾರಕ್ಕೆ ನಷ್ಟವಿಲ್ಲವೇ? ಮೊದಲಿಯೂರ್‌ರವರು ಆಫೀಸುಗಳ ಕಡೆಗೆ ದೃಷ್ಟಿಯಿಟ್ಟು ತೀವ್ರ ಪರಿಶೀಲನೆಗೆ ತೊಡಗಿದ್ದರಿಂದ ಇಂದು ನಮ್ಮ ಸರಕಾರದ ಸಿಬ್ಬಂದಿ ಆದಷ್ಟು ಹೆದರಿ ನಡೆಯುತ್ತಾ ಇದೆ! ಹಲವು ಉದ್ಯೋಗಸ್ಥರ ಮನೆ, ಕಾಫಿ ತೋಟದ ಲೆಕ್ಕಗಳನ್ನಿಡುವ ರಿಜಿಸ್ಟ್ರಿಗಳೂ, ಲೇಖನಿ ಪೆನ್ಸಿಲುಗಳೂ ಸರಕಾರಿ ಸ್ಟೇಶನ್ನರಿಯಿಂದ ದೋಚಿಕೊಂಡು ಹೋದವುಗಳೇ! ಆದರೆ ಮೊದಲಿಯೂರರ ದೃಷ್ಟಿ ಆಕಡೆ ಬಿದ್ದ ಕಾರಣ ಈ ಲೂಟಿ ಕಡಿಮೆಯಾಯಿತು.

ಶ್ರೀ ಮೊದಲಿಯೂರ್‌ರವರು ಅಚ್ಚುಗಗಪ್ಪಿನ ಆಡಂಬರವಿಲ್ಲದ ಸರಳತನದ ವ್ಯಕ್ತಿ. ಎಲ್ಲರಿಗೂ ಅವರು ಸುಲಭವಾಗಿ ಕಾಣಲ್ಪಡುತಿದ್ದರು. ' ಕೊಡಗಿನಂಥಾ ಕರ್ತವ್ಯಭ್ರಷ್ಟವಾದ ಮತ್ತು ಅನುಕರಣಶೀಲ ಜನತೆಗೆ ಸ್ವಲ್ಪಮಟ್ಟಿಗೆ ಹಿಟ್ಲರ್‌ರಂಥವರೇ ಬೇಕ . ಆದರೆ ಶ್ರೀ ಮೊದಲಿಯೂರರು ಎಲ್ಲರಿಗೂ ಸುಲಭವಾಗಿಯೂ ಇರಲಿಲ್ಲ. ಅಧಿಕಾರಿಗಳು ತಮ್ಮವರಿಗೆ ಹೆದರಿನಡೆಯುತಿದ್ದರು. ಅಲ್ಲದೆ ಕೆಲವರು ಅಷ್ಟುಹೆದರಿಯೂ ಹೊರಗೆ ಬಂದ ನಂತರ ತಾವು ಹೀಗೆ ಹೇಳಿದೆ, ಹಾಗೆ ಹೇಳಿದೆ,' ಎಂದು ಜನರೊಡನೆ ತಮ್ಮ ಆಟ್ಟಹಾಸವನ್ನು ಹೇಳಿಕೊಳ್ಳುತಿದ್ದರು. ಕಾಲೇಜು ಸ್ಥಾಪನೆ ಬಗ್ಗೆ ದೇಶದಲ್ಲಿದ್ದ ಭಿನ್ನಾಭಿಪ್ರಾಯಕ್ಕೆ ಗಮನವಿಡದೆ ಕೆಚ್ಚೆದೆಯಿಂದ ತನ್ನ ಕಾರ್ಯವನ್ನು ಸಾಧಿಸಿದ್ದಾರೆ. ಹೆಚ್ಚು ಹಣವಿರುವಂಥಾ ಸರಕಾರವು ಆಗಿದ್ದರೆ ಹೆಬ್ಬಾಲೆಯಂಥಾ ಹತ್ತಾರು ಗ್ರಾಮಗಳನ್ನು ಇನ್ನೂ ಮುಂದಕ್ಕೆ ತರುತಿದ್ದರು. ಹೊಸ ಬದಲಾವಣೆಗನುಗುಣವಾಗಿ ಹರಿಜನ ಉದ್ಧಾರ, ಸ್ತ್ರೀವಸ್ಥಾನ ಪ್ರವೇಶ ವಯಸ್ಕರ ಶಿಕ್ಷಣ, ಗ್ರಾಮದ ಅಭಿವೃದ್ಧಿ ಇಂಥಾ ಕೆಲಸಗಳಲ್ಲಿ ಜನರು ಅವರೊಹನೆ ಸಹಕರಿಸುತ್ತಿರಲಿಲ್ಲವೆಂದು ನಾನು ತಿಳಿಯುವೆನಲ್ಲದೆ ಸ್ವತಃ ಶ್ರೀ. ಮೊದಲಿಯೂರ್‌ರವರು ಇಂಥಾ ಕೆಲಸಗಳಲ್ಲಿ ತುಂಬಾ ಉತ್ಸಾಹಿಯಾಗಿಯೇ ತೋರುತಿದ್ದರು. ನೀರಾವರಿ, ವಿದ್ಯುಚ್ಛಕ್ತಿ ಯೋಜನೆಗಳು ಅವರ ನೆನಸಿನ ಕನಸಿನಲ್ಲಿ ಉಳಿದುವು.

ಮೊದಲಿಯೂರರು ತನ್ನ ಕೆಲಸಕ್ಕೆ ತಾನೇ ಹೆಮ್ಮೆಯನ್ನು ಪ್ರದರ್ಶಿಸಿಕೊಳ್ಳುತಿದ್ದರು. ಏನೂ ಕೆಲಸ ಮಾಡದೆ ಯಾವುದೋ ಅಧಿಕಾರಲಾಲಸೆಯಿಂದ ಕಾದಾಡುವ ನಮ್ಮ ಮುಂದಾಳುಗಳು ತೋರಿಸುವ ಆತ್ಮಪ್ರತಿಷ್ಠೆಯಂತೆ ಇದಲ್ಲ. ತಾನು ಮಾಡಿದ ಕೆಲಸಕ್ಕೆ ತನ್ನ ಮೆಚ್ಚಿಕೆಯನ್ನು ತೋರ್ಪಡಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ. ಎಲ್ಲರಂತೆ ಅವರೂ ಹಣವೆಂದರೆ ಪ್ರಾಣಬಿಡತಕ್ಕಂಥವರು, ಆದರೆ ಜನರನ್ನು ವಂಚಿಸಿ ಕಪ್ಪುಸಂತೆ ಮೂಲಕ ಸಂಪಾದಿಸುವ ಜನರಂತೆ ಅಥವಾ ಇತರ ಕೆಲಸಗಾರರಂತೆ ಅವರಿರಲಿಲ್ಲ. ಹಣದ್ದಾಸೆಗೂ ಒಂದು ವಿಮಿತಿಯನ್ನೇ ಇಟ್ಟಿದ್ದರು. ಇಂದು ದೇಶದಲ್ಲಿ ಅವರ ಮೇಲೆ ಸದಭಿಮಾನ ಜನಕ್ಕೆ ಇಲ್ಲವೆಂದು ಹೇಳುವುದು ಅಕ್ಷರಶಃ ನಿಜವಿಶ್ಲೇಷಣೆಯಾಗಲಾರದು. ಪ್ರಗತಿದಾಯಕವಾಗಿ ಕೆಲಸವನ್ನು ಮಾಡುವ ರೂವಾರಿಯೂ ಜನಪ್ರಿಯನಾಗಲಾರ! ಜನಪ್ರಿಯನಾಗಬೇಕಾದರೆ ಕಾದಾಡುವ ಎಡಬಿಡಂಗಿಗಳ ಹೆಸ್ಸುತಟ್ಟಿ ತಾನು ಮಾತ್ರ ತನ್ನ ಅಧಿಕಾರದ ವೇದಿಕೆಯಲ್ಲಿ ನಿಮಿತ್ತಮಾತ್ರನಾಗಬೇಕು. ಆಗ ಎಲ್ಲರಿಂದಲೂ ಸ್ಮರಿಸಿಕೊಳ್ಳತಕ್ಕಂಥವನಾಗುವನು. ಕೊಡಗಿನಂಥಾ ಸ್ಥಳದಲ್ಲಿ ಬ್ರಹ್ಮನೇ ಬಂದರೂ ಅವನು ಜನಾಭಿವೃದ್ಧಿಗೆ ಕಲಸ ಮಾಡತೊಡಗಿದರೆ ಅಸಮಾಧಾನಹೊಂದದ ಮತ್ತೊಂದು ಪಕ್ಷವು ಅವನನ್ನು ತಚ್ಚೀಕರಿಸದೆ ಬಿಡಲಾರದು.

ಶ್ರೀ ಮೊದಲಿಯೂರರು ಕಂದಾಯ ಹೆಚ್ಚವಾಡುವ ಕೊಡಗನ್ನು ಪ್ರತ್ಯೇಕವಾಗಿ ಬಹುಕಾಲ ಇಟ್ಟು ತಾನು ನಿರಂತರ ಅದರ ಅಧಿಕಾರಿಯಾಗಿರಬೇಕೆಂಬ ಆಸೆಯಿಂದ ಎಂಬುದಾಗಿ ಹೇಳಿದ್ದನ್ನು ಕೇಳಿದ್ದೇನೆ. ಸುಳ್ಳು ಲೆಕ್ಕವನ್ನು ಕೇಂದ್ರ ಸರಕಾರಕ್ಕೆ ಅವರು ಕಳುಹಿಸಿರಬಹುದೆಂದು ಕೌನ್ಸಿಲಿನಲ್ಲಿ ಹೇಳಿದ್ದೆ. ಕೇವಲ ಜೆಕ್ಕ ಹುಡುಗರೂ ಇಂಥಾ ಮಾತುಗಳನ್ನು ಆಡಲಾರರು. ಈ ರೀತಿಯ ವಾದವೆಬ್ಬಿಸಿ ಜನರಕಣ್ಣಿಗೆ ಮಣ್ಣೆರಚುವುದರಿಂದ ಕ್ಷಣಿಕ ಸಂತೋಷವಾಗಬಹುದಾದರೂ ಹೇಳುವವರ ಬೇಜವಾಬ್ದಾರಿಕೆಯು ಧರ್ತನೆಯು ಹಾಸ್ಯಾಸ್ಪದವಾಗಿದ್ದು. ಇಂಥಾ ಸ್ಥಳದಲ್ಲಿ ರಾಜ್ಯಭಾರ ಮಾಡುವುದು ಪ್ರಯಾಸಕರವೆಂದು ಶ್ರೀ ಮೊದಲಿಯೂರರು ಒಂದು ಎರಡು ತಿಂಗಳಲ್ಲಯೇ ಹೇಳಿಕೊಂಡಿದ್ದರು ಅವರ ಎರಡು ವರ್ಷದ ಅಳ್ವಿಕೆಯಿಂದ ಕೊಡಗಿಗೆ ವಿಪರೀತ ಜಾಗೃತಿ ಉಂಟಾಗಿದೆ. ಅವರಂತೆ ಅವರ ಅಧೀನದಲ್ಲಿರುವ ಎಲ್ಲಾ ಅಧಿಕಾರಿಗಳು ಮುಂದಕ್ಕೂ ಇದ್ದರೆ ಇನ್ನೆಷ್ಟೋ ಸುಧಾರಣೆ ಹೊಂದಲು ಎಡೆಯಿದೆ.

ಹಿಂದಿನ ಸರಕಾರವು ಯುದ್ಧೋತ್ತರ ಯೋಜನೆಗಳನ್ನೂ ದೇಶದ ಬಡ್ಡಿಜ್ಜಟ್ಟನ್ನೂ ಸಿಬ್ಬಂದಿದಂನ್ನೂ ಸ್ತ್ರಿವಿತವಾಗಿಟ್ಟಿರಲಿಲ್ಲ. ಅದನ್ನೆಲ್ಲಾ ಅಲ್ಲಾಡಿಸುವ ಭಾರ ಇವರ ಮೇಲೆ ಬಂದಾಗ ಅಸಮಾಧಾನಗೊಂಡ ಉದ್ಯೋಗಸ್ಥರೂ ಜನರೂ ಇನ್ನಷ್ಟು ರೇಗುವದು ವಾಸ್ತವ. ಆಗ ವ್ಯಕ್ತಿಯಲ್ಲಿ ಇರುವ ಕಲ್ಪಸ್ವಲ್ಪ ಕ್ಷಣಿಕ ಸ್ವಭಾವವನ್ನು ಹಿಮ್ಮೆಟ್ಟಿಯಷ್ಟು ನೋಡ್ದದುಮಾಡಿ ಮಾತಾಡುವರು. ಅದೇ ರೀತಿ ಇಂದು ಮೊದಲಿಯೂರರ್‌ಮೇಲೆ ಅನೇಕ ತರಹದ ಮಾತುಗಳನ್ನು ಉದ್ಯೋಗಸ್ಥರೂ, ಜನರೂ, ತಿಳಿದವರೂ, ತಿಳಿಯದವರೂ ಎಲ್ಲರೂ ಹೇಳುತ್ತಿದ್ದಾರೆ. ಅವರ ಈ ಕಲಸದ ತೀವ್ರ ದೃಷ್ಟಿಯನ್ನೇ ತಮ್ಮ ರಾಜಕೀಯ ಪಕ್ಷದ ಸಾಧನೆಗಾಗಿ ಉಪಯೋಗಿಸಿಕೊಳ್ಳಲು ಹಲವಾರು ಕಲ್ಪನೆಯ ಮಾತುಗಳನ್ನು ಹೊರಡಿಸಿದ್ದಾರೆ. ಆದರೆ ಅವರನ್ನೂ ಅವರ ಅಳ್ವಿಕೆಯನ್ನೂ ಸೂಕ್ಷ್ಮವಾಗಿ ಮತ್ತು ದೂರದಿಂದ ನೋಡಿದ ನಾನು ಅವರನ್ನು ಆದರ್ಶರಾದ ಅಧಿಕಾರಿಯೆಂದು ಹೇಳದೆ ಇದ್ದರೆ ನಾನು ತೃಪ್ತಿ ಹೊಂದಲಾರೆನು.

ವಿಜ್ಞಾನ ವಿನಾಶದ ಮಾರ್ಗದಲ್ಲಿ ?

ಒಲೆಯ ಎಣ್ಣೆ, ಔಷಲೆಣ್ಣೆ ದೀಪಗಳು ಮಾಯವಾಗಿ, ಕಲ್ಲೆಣ್ಣೆ ದೀಪ ಬಂದು ಅವು ನಿರುಪಯೋಗಿಯೂಗಿ ವಿದ್ಯುದ್ದೀಪಗಳು ಇಂದು ಪ್ರಕಾಶಿಸತೊಡಗಿವೆ. ಎತ್ತು ಕತ್ತೆ, ಕುದುರೆಗಳಿಂದ ಎಳೆಯುವ ಗಾಡಿ ಹಾಗೂ ಕುದುರೆಯನ್ನು ಹತ್ತಿ ಪ್ರವಾಸ ಮಾಡುವುದು ಹೋಗಿ ಲಾರಿ, ಕಾರು, ಉಗಿ ಬಂಡಿ, ವಿದ್ಯುತ್ ವಾಹನಗಳು ಹಳೆಯವೆನಿಸಿ, ವಿಮಾನ ಆಕಾಶಯಾನಗಳು, ದಿನಬಳಕೆಗೆ ಬರತೊಡಗಿವೆ. ವಿದ್ಯುದುಪಯೋಗದ ವೈವಿಧ್ಯತೆಯನ್ನನುಸರಿಸಿ ಜಗತ್ತಿನ ಒಂದು ಮೂಲೆಯಲ್ಲಿ ಮಾತನಾಡಿದುದು ಇನ್ನೊಂದು ಮೂಲೆಯಲ್ಲಿ ಕೂಡಲೇ ಕೇಳಬರುವಂತಾಗಿದೆ ಇಷ್ಟೇ ಅಲ್ಲದೆ ಆ ಮಾತನಾಡುವವನ ಮುಖವು ಕಾಣಬರುವಂತೆ ವ್ಯವಸ್ಥೆಯಾಗಿದೆ.

"ಮಾನವನ ಆಥವಾ ಇನ್ನುಳಿದ ಜೀವಶಕ್ತಿ "ಗಳು ನಿರುಪಯೋಗವಾಗುತ್ತ ನಡೆದಿರುತ್ತದೆ. ನೆಲ, ನೀರು, ಬೆಂಕಿ, ಪೊಳ್ಳು, ಗಾಳಿ, ಈ ಐದು ಮಹಾ ಭೂತಗಳ ವಿವಿಧ ನಿಶ್ರಣದಿಂದ, ವೈಜ್ಞಾನಿಕ ಕ್ರಿಯೆಯಿಂದ ಪ್ರಚಂಡ ಮಾರ್ಪಾಡುಗಳು ಮಾನವ ಜೀವನದಲ್ಲಿ ಪ್ರತಿ ದಿನ ಆಗುತ್ತಲಿರುವುದನ್ನು ಕಾಣುತಿದ್ದೇವೆ, ಕೇಳುತ್ತಿದ್ದೇವೆ, ಓದುತ್ತಿದ್ದೇವೆ. ವಿಜ್ಞಾನವು ಇಂದು ಮುಗಿಲಿಗೇ ನಿಚ್ಚಣಿಕೆಯನ್ನು ಹಚ್ಚಲು ಪ್ರಾರಂಭಿಸಿದೆ; ಮತ್ತು ಅತಿ ಶೀಘ್ರ ಗತಿಯಿಂದ ಆ ದಾರಿಯಲ್ಲಿ ಕ್ರಮಿಸುತ್ತಲಿದೆ, ಭ್ರಮಣ ಮಾಡುತ್ತಲಿದೆ.

ನಮ್ಮ ಭಾರತ ಘಟನಾ ಸಮಿತಿಯಲ್ಲಿ ಆನರ ಸದಸ್ಯರಾದ ಶ್ರೀ ಎಚ್. ವಿ. ಕಾಮತರು "ಒನ್ಮೆ ಭಾರತದ ಘಟನೆಯಲ್ಲಿ ಚಂದ್ರಲೋಕವ ರಹದಾರಿ ಚೀಟಿಗೆ ಅಸ್ಪದವಿರುವಂತೆ ಮಾಡಿರಿ. ಏಕೆಂದರೆ ಇಂದಿನ ವಿಜ್ಞಾನದ ಪ್ರಗತಿಯನ್ನು ನೋಡಿದರೆ, ಚಂದ್ರಲೋಕ ಸ್ವಯಾಣ ಫಲಿಸುವುದು ಅನತಿ ದೂರದಲ್ಲಿದೆ" ಎಂಬ ಮಾತನಾಡಿದ್ದರು. ಅದರಂತೆ ಮಂಗಳ ಲೋಕದ ಆಂಗಳವನ್ನೂಯೂ ವಿಜ್ಞಾನಿಗಳು ಅಳಲು ಬಯಸಿ ಅವಕ್ಕನುಕೂಲವಾಗುವಂತೆ ಶೋಧಗಳನ್ನು ನಡೆಸಿದ್ದಾರೆ.

ಪಶ್ಚಿಮ ಗೋಲಾರ್ಧ

ಈ ಎಲ್ಲ ವೈಜ್ಞಾನಿಕ ಪ್ರಗತಿಗೆ ಪಶ್ಚಿಮ ಗೋಲಾರ್ಧದ ಪರಿಶ್ರಮವೇ ಕಾರಣವೆಂದು ಸಕಲರ ತಿಳುವಳಿಕೆಯಾಗಿದೆ. ಮೂಲತಲ್ಲಿ ಅದು ಪೂರ್ವ ಗೋಲಾರ್ಧದ ವರದೆಂದು ಹೇಳಲು ಸಾಕಷ್ಟು ಸಾಧನ ಸಾಮಗ್ರಿಗಳನ್ನು ದೊರಕಿಸುವ ಪ್ರಯತ್ನವೂ ಶೋಧವೂ ಇನ್ನೂವರೆಗೆ, ನಡೆದಿಲ್ಲವೆಂದು ಹೇಳಬಹುದು. ಆಥರ್ವಣ ವೇದದಲ್ಲಿ ಎಲ್ಲವೂ ಇವೆಯೆಂದು ಪೂರ್ವ ಗೋಲಾರ್ಧದ ಜನ ಕೆಲವರು ಹೇಳುತ್ತಿದ್ದಾರೆ. ಆದರೆ ಅವರದವರಿಗೇ ನಿಜದ ನಂಬಿಕೆಯಿಲ್ಲವೆಂದು—ಏಕೆಂದರೆ ಆಳವಾದ ಅಭ್ಯಾಸ, ಸಂಶೋಧನಾತ್ಮಕ ಬುದ್ಧಿಗಳು ದಾಸ್ಯ ಹಾಗೂ ಪ್ರತಿಕೂಲ ವಾತಾವರಣದ ಪರಿಣಾಮವಾಗಿ, ಇನ್ನೂ ಇವರಲ್ಲಿ ಸಾಕಷ್ಟು ಪ್ರಗತಿ ಹೊಂದಿಲ್ಲ—ಹೇಳಬಹುದಾಗಿದೆ.

ಆದ್ದರಿಂದ ಇಂದು ವೈಜ್ಞಾನಿಕ ಪ್ರಗತಿಯು ಪಟ್ಟವು, ಪಶ್ಚಿಮ ಗೋಲಾರ್ಧಕ್ಕೇ ಅವಲ್ಲಾ ವಿಶೇಷವಾಗಿ ಯೂರೋಪ್ ಮತ್ತು ಅಮೇರಿಕಾ ಖಂಡಗಳಿಗೇ ವಿಸಲಾಗಿರುವುದೆಂದರೆ ಬಹುಶಃ ತಪ್ಪಾಗಲಾರದು. ಅಮೇರಿಕಕ್ಕಿಂತಲೂ ಯೂರೋಪವು ಆದರಲ್ಲೂ ಜರ್ಮನಿಯು ವೈಜ್ಞಾನಿಕ ಪ್ರಗತಿಯು ಶಿಖರವನ್ನು ಮುಟ್ಟಿದೆ. ಪಶ್ಚಿಮಗೋಲಾರ್ಧದಲ್ಲಿಯೇ ಪ್ರಾರಂಭವಾದ "ಜಾಗತಿಕ ಮಹಾ ಯುದ್ಧ" ಎಂದು ಕರೆಸಿಕೊಂಡ ಎರಡು ಮಹಾಯುದ್ಧಗಳ ಮುಖ್ಯ ಕಾರಣರು ಜರ್ಮನರೇ ಆಗಿದ್ದರೆಂಬ ಮಾತನ್ನು ಇಲ್ಲಿ ನೆನಸಿಕೊಳ್ಳಬಹುದು.

ಇಪ್ಪತ್ತನೆಯ ಶತಮಾನದ ಪ್ರಥಮ ಚತುರ್ಥಾಂಶದಲ್ಲಿಯ ಪ್ರಥಮ ಜಾಗತಿಕ ಮಹಾ ಯುದ್ಧದಲ್ಲಿ "ಟ್ಯಾಂಕು" ಉದ್ಭವವಾದರೆ, ದ್ವಿತೀಯ ಚತುರ್ಥಾಂಶದಲ್ಲಿಯ ದ್ವಿತೀಯ ಜಾಗತಿಯ ಮಹಾ ಯುದ್ಧದಲ್ಲಿ ಬಾಂಬರು ವಿಮಾನಗಳು, ವೈನ್ಯಾನಿಕನಿಲ್ಲದ ಬಾಂಬರು ವಿಮಾನಗಳು, ಅಣು ಬಾಂಬುಗಳು, ವಿಷವಾಯುಗಳು ಮೊದಲಾದ ಪ್ರಚಂಡ ವಿನಾಶಕಾರಿ ವಸ್ತುಗಳನ್ನು ವಿಜ್ಞಾನವು ಒದಗಿಸಿಕೊಟ್ಟಿತು. ಈಗ ಆ ದ್ವಿತೀಯ ಜಾಗತಿಕ ಮಹಾ ಯುದ್ಧವು ಮುಗಿದು ಹೋಗಿ ೫ ವರ್ಷಗಳು ಕಳೆದಮೇಲೂ, ಇಂದು ಅಮೇರಿಕೆಯಲ್ಲಿ ಅಣು ಬಾಂಬಿಗಿಂತಲೂ ಭೀಕರವಾದ ಮತ್ತು ಪ್ರಚಂಡ ವಿನಾಶ ಶಕ್ತಿಯು "ಜಲಜನಕ ಬಾಂಬು" (ಹೈಡ್ರೊಜನ್ ಬಾಂಬು) ವಿಜ್ಞಾನಿಗಳಿಂದ ರೂಪುಗೊಳ್ಳುತ್ತಲಿದೆ.

ತತ್ವಜ್ಞಾನಿಯು ಮತ

ಪಾಶ್ಚಿಮಾತ್ಯರಲ್ಲಿ ಹೀಗೆ ವಿಜ್ಞಾನವು ದಿನಕ್ಕೊಂದು ಚಂದದಿಂದ ವಿನಾಶದ ನಿಚ್ಚಣಿಕೆಯನ್ನು ಏರುತ್ತಿರುವುದನ್ನು ಕಂಡು ಪಾಶ್ಚಿಮಾತ್ಯ ತತ್ವಜ್ಞಾನಿಗಳೇ ಬೇಜಾರುಪಟ್ಟುಕೊಂಡಿದ್ದಾರೆ. ಡೈಲಿ ಹೆರಾಲ್ಡ್ ಎಂಬ ಪತ್ರಿಕೆಯಲ್ಲಿ "ಮುಂಬರುವ ಆರ್ಧ ಶತಮಾನ" ಎಂಬ ಬರಹದಲ್ಲಿ ಅದರ ಲೇಖಕರೂ ಪ್ರಖ್ಯಾತ ತತ್ವಜ್ಞಾನಿಗಳೂ ಆದ ಇಂಗ್ಲಂಡಿನ ಶ್ರೀ ಸಿ. ಇ. ಎಂ. ಜೋಡ್ ಎಂಬವರು "ವಿಜ್ಞಾನಿಗಳು ಇನ್ನೂ ಹೆಚ್ಚು ಹೆಚ್ಚು ವಿನಾಶಕಾರಕವಾದ ಆಸ್ತ್ರಗಳನ್ನು ಶೋಧಿಸುವ ಮೊದಲೇ ಯಾರಾದರೊಬ್ಬರು ಅವರೆಲ್ಲರನ್ನೂ ಕಟ್ಟಿ ಒಂದು ಚೀಲದಲ್ಲಿ ತುಂಬಿ ಸಮುದ್ರದಲ್ಲಿ ಮುಳುಗಿಸಿಬಿಡಬಾರದೇಕೆ?" ಎಂದು ಪ್ರಶ್ನೆ ಕೇಳಿದ್ದಾರೆ.

"ಇದೇ ಪ್ರಶ್ನೆಯನ್ನು ಬೇರೆಯ ಸೌಮ್ಯ ಭಾಷೆಯಲ್ಲಿ ಹೇಳಬೇಕಾದರೆ ವಿಜ್ಞಾನದ ಪರಿಣಾಮಗಳನ್ನು ನಮ್ಮ ವಿನಾಶಕ್ಕಾಗಿಯೇ ನಾವು ಉಪಯೋಗಿಸಿಕೊಳ್ಳಕೂಡದೆಂಬ ಸದ್ಬುದ್ಧಿಯು ನಮಗೆ ಬರುವವರೆಗೆ ವೈಜ್ಞಾನಿಕ ಸಂಶೋಧನೆಗಳ ಪರಿಣಾಮಗಳ ಪ್ರಕಟಣೆಗಳನ್ನು ಪ್ರತಿಬಂಧಿಸಬಾರದೇಕೆ? ಆದರೆ ಇದಾವುದೂ ಸಾಧ್ಯವಿಲ್ಲದ್ದರಿಂದ ಸಮ್ಯದ ಜಗತ್ತಿನಲ್ಲಿ ಯುದ್ಧವನ್ನು ತಡೆಯುವ ಏಕನೇವ ಮಾರ್ಗವೆಂದರೆ ರಾಷ್ಟ್ರಕೂಟಗಳನ್ನು ರಚಿಸಿಕೊಳ್ಳುವುದು. ಆದರೆ ಕೆಲವು ರಾಷ್ಟ್ರಗಳು ಒಟ್ಟುಗೂಡಿಕೊಂಡು ತಮ್ಮ ಸಾರ್ವಭೌಮಾಧಿಕಾರ, ಸೈನ್ಯಬಲ, ನೌಕಾಬಲ, ವಿಮಾನ ಬಲ ಮತ್ತು ವಿದೇಶ ಧೋರಣೆಗಳನ್ನು ಆ ರೀತಿಯಾಗಿ ರಚಿಸಿಕೊಂಡ ರಾಷ್ಟ್ರಕೂಟಕ್ಕೇ ಒಪ್ಪಿಸಿ ಕೊಡಬೇಕು" ಎಂದು ಆ ತತ್ವಜ್ಞಾನಿಗಳು ಆ ಲೇಖನದಲ್ಲಿ ಸ್ಪಷ್ಟವಾಗಿ ಸಾರಿದ್ದಾರೆ

ಇದನ್ನೆಲ್ಲ ನೋಡಿದರೆ ನಮ್ಮ ಮಹಾ ಪ್ರಧಾನ ಪಂಡಿತ್‌ಜೀಯವರು ಹೇಳುವಂತೆ "ಜಗತ್ತಿಗೇ ಒಂದು ಅಡಳಿತ" ಎಂಬ ಸೂತ್ರದತ್ಯಲೇ ಪಾಶ್ಚಿಮಾತ್ಯರೂ ಸುಳಿಯುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಪಂಡಿತಜೀಯವರಾದರೂ ವಿಜ್ಞಾನದ ಪುರಸ್ಕರ್ತರೇ ಆಗಿದ್ದಾರೆ. ಆದರೆ ಅವರು ವಿಜ್ಞಾನವು ವಿಧಾಯಕ ಕಾರ್ಯಕ್ಕೆ ಅನುಕೂಲವಾಗೆಜೇಕೇ ಹೊರತು ವಿನಾಶ ಕಾರ್ಯಕ್ಕಲ್ಲವೆಂಬ ಮಾತಿಗೂ ಅಷ್ಟೇ ಅಂಟಿಕೊಂಡಿದ್ದಾರೆಂಬುದನ್ನು ಅವರು ಆ ಲ್ಲಲ್ಲಿ ಆಗಾಗ ಆಡಿದ ಮಾತುಗಳಿಂದ ಧ್ವನಿತವಾಗುತ್ತದೆ.

ದ್ವಿತೀಯ ಜಾಗತಿಕ ಮಹಾ ಯುದ್ಧ ಮುಗಿಸಿದ್ದಾಗಲೂ ವಿಜ್ಞಾನದ ವಿನಾಶಕ್ತಿಯು ಶಿಖರವಾಗಿ "ಅಣು ಬಾಂಬು" ಅಮೇರಿಕೆಗೆ ಗೆಲವು ದೊರಕಿಸಿಕೊಟ್ಟದನ್ನು ನೋಡಿ ರಷ್ಯಾ ದೇಶವು ಈ ಅಣು ಬಾಂಬನ್ನು ತಾನೂ ಸಿದ್ಧಗೊಳಿಸುವ ಕಾರ್ಯದಲ್ಲಿ ಈಗ ಸಾಫಲ್ಯವನ್ನು ಪಡೆಯಿತು. ಅದನ್ನು ಕಂಡು ಅಮೇರಿಕೆಯು ಅಣುಬಾಂಬಿಗಿಂತಲೂ ಭೀಕರತರವಾದ ಇನ್ನೊಂದು ಅಸ್ತ್ರವನ್ನು ಶೋಧಿಸಲು ತನ್ನ ವಿಜ್ಞಾನಿಗಳಿಗೆ ಆಜ್ಞೆ ಪುರಸ್ಕಾರಗಳನ್ನು ಮಾಡಿತು. ಅದರ ಫಲವಾಗಿಯೇ ಇಂದು ಹೊಸದೊಂದು ಭೀಕರತರವು "ಜಲಜನಕ ಬಾಂಬು" ಅಮೇರಿಕೆಯಲ್ಲಿ ಸಿದ್ಧವಾಯಿತೆಂದು ಹೇಳಲಾಗುತ್ತದೆ. ಇದನ್ನು ಕಂಡು ರಷ್ಯಾ ದೇಶವು ಇನ್ನು ಮುಂದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗದೆ ಇರಲಾರದು.

ಹೀಗೆಯೇ ಈ ವಿಜ್ಞಾನದ ವಿನಾಶಕ ನಿಚ್ಚಣಿಕೆಯನ್ನು ಈ ದೇಶಗಳು ಸ್ಪರ್ಧೆಯಿಂದ ಏರುತ್ತಲೇ ನಡೆದಿರುವುದು, ಜಾಗತಿಕ ಶಾಂತಿಗೆ ಭಂಗ ಬರಬಾರದಂಬ ಸದುದ್ದೇಶದಿಂದಲೇ ಎಂದು ಹೇಳಲಾಗುತ್ತದೆ! ಇದು ಎಂತಹ ವಂಚನೆ? ಇದಕ್ಕೆ ಅಂತವೆಲ್ಲಿ? ವಿನಾಶಕ ಶಕ್ತಿ ಸಾಮರ್ಥ್ಯಗಳ ಸ್ವಾಧೀನತೆಯಲ್ಲಿ ವಿಜ್ಞಾನಿಗಳೆಂದು ಪ್ರಳಯಕಾರಕ ನಿಚ್ಚಣಿಕೆಯನ್ನು ಭರದಿಂದ ಏರುತಲಿದ್ದಾರೆ. ಇದಕ್ಕೆ ಕಡಿವಾಣ, ಒಂದಿಲ್ಲೊಂದು ರೀತಿಯಿಂದ ಜಗತ್ತಿನ ಮೇಲೆ ಪ್ರಭುತ್ವ ಸ್ಥಾಪಿಸಬೇಕೆಂಬ ಲಾಲಸೆ ಎಂದರೆ ತಪ್ಪೇನು?

——

ಜೈಹಿಂದ್

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಆತ್ಯುತ್ತಮ ಮೂದರಿಯೆ ಬೆನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಬಟ್ಟೆ ತೆಗೆಯುವವರು ಈ ಪತ್ರಿಕೆಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ಬಂದು ಸ್ವಥಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಕಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12-8

ಗಮನಿಸಿರಿ!

ದಿನಕ್ಕಿಂ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಆತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಂಫೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ಸಮೂಸೆಯ ಬಟ್ಟೆಗೂ ಅದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೂ ಬ್ರದರ್ಸ್ ಎತ್ತಿದ ಕೈ!

ಪಟ್ಟೂ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು

52-8

ವಿಚಾರ ಸ್ವಾತಂತ್ರ್ಯ.

ಲೇ:—ಶ್ರೀ ಬಿ. ಡಿ. ಗಣಪಕಿ.

ಪರದಾಸ್ಯತೆಯೆಂದರೆ ಸುತಲೂ ಕತ್ತಲೆ ಕವಿದಂತೆ. ಪರದಾಸ್ಯತೆಯಲ್ಲಿ ಎ ರ್ವದಿಶೆಯಲ್ಲೂ ಬಂಧನಗಳು ತುಂಬಿರುತ್ತವೆ. ಅಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲ. ರಾಜಕೀಯ ಸ್ವಾತಂತ್ರ್ಯವಿಲ್ಲ. ಪ್ರಚಾರ ಸ್ವಾತಂತ್ರ್ಯವಿಲ್ಲ. ಕಡೆಗೆ ವಿಚಾರ ಸ್ವಾತಂತ್ರ್ಯವೂ ಇಲ್ಲದಾಗುತ್ತದೆ. ಭರತಖಂಡವು ಈ ಪರದಾಸ್ಯತೆಯಲ್ಲಿನ್ನು ಕಷ್ಟಪಟ್ಟಿತು. ಕಡೆಗೂವೈ ಮಹಾವಿಭೂತಿಗಳ ಪಥದರ್ಶನದಿಂದ ಭಾರತವು ಸ್ವತಂತ್ರವಾಯಿತು. ಸ್ವತಂತ್ರ ಭಾರತವು ಪ್ರಜಾಪ್ರಭುತ್ವ ರಾಷ್ಟ್ರವೆಂದೂ ಸಾರಲ್ಪಟ್ಟಿತು.

ನಮಗೆ ಇನ್ನೂ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲವೆಂಬುದು ನಿಜ. ಶತಮಾನಗಳ ಬ್ರಿಟಿಷ್ ಅಳಿಲೆಯ ಭಾರದಲ್ಲಿ ಹಿಕ್ಕಿಕ್ಕಲ್ಪಟ್ಟ ನಾವು ನೈಜಸ್ವಾತಂತ್ರ್ಯವನ್ನು ಕ್ರಮಾಗತ ಮಾಡಿಕೊಳ್ಳಲು ಇನ್ನೂ ಸಮಯಬೇಕು. ಬೇರೊಂದು ಮಾದರಿಯ ಭಾರದಲ್ಲಿ ಬಗ್ಗಿದ ಗಿಡವು ಮರದ ಭಾರ ತೆಗೆದ ನಂತರವೂ ನೇರವಾಗಿ ಬೆಳೆಯಲು ಸಮಯ ತೆಗೆದುಕೊಳ್ಳುವುದಿಲ್ಲವೇ? ಹಾಗೆಯೇ ಒತ್ತಿ ಹಿಡಿಯಲ್ಪಟ್ಟಿದ್ದ ಸ್ವಾತಂತ್ರ್ಯಪ್ರಜ್ಞೆಯೂ ಚಿಗುರಿ ಬೆಳೆಯಲು ಸಮಯ ಬೇಕು

ಸ್ವಾತಂತ್ರ್ಯ ಬಂದೊಡನೆಯೇ ಸರ್ವವೂ ಮನೆಬಾಗಿಲಿಗೆ ಬಂದು ಬೀಳಬೇಕೆಂದು ಆಶಿಸುವವರು ಇನ್ನೂ ಇದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಕ್ಷಣ ಬೊಕ್ಕಸದಲ್ಲಿ ಕಾಸು ಹೆಚ್ಚಾಗದು; ಇಲ್ಲವೇ ಕಣಜದಲ್ಲಿ ಕಾಳು ತುಂಬದು. ಸೂರ್ಯನು ಪೂರ್ವದಿಕ್ಕಿನಲ್ಲಿ ಉದಯಿಸಿ ಇಡೀ ಜಗತ್ತಿಗೇ ಬೆಳಕಾದರೂ ಪ್ರತಿ ಮನೆಯ ಒಲೆ ಹೇಗೆ ಅದರಿಂದ ಹಚ್ಚಲ್ಪಡಲಾರದೋ ಅದೇ ರೀತಿ ಸ್ವಾತಂತ್ರ್ಯ ಬಂದಗೂ ಭಾರತೀಯನ ಜೀವನ ಅದರಿಂದ ಪರಿಶ್ರಮವಿಲ್ಲದೆ ಉತ್ತಮಗೊಳ್ಳಲಾರದು. ಮನೆಯ ಒಲೆ ಉರಿಯಬೇಕಾದರೆ ಪ್ರತ್ಯೇಕ ಹಣತೆ ಹೇಗೆ ಪ್ರತಿ ಮನೆಗೆ ಅವಶ್ಯವೋ ಅದೇ ರೀತಿ ಸ್ವಾತಂತ್ರ್ಯವು ಅರ್ಥಪೂರ್ಣವಾಗಬೇಕಾದರೆ ಪ್ರತಿ ವ್ಯಕ್ತಿಯೂ ತನ್ನ ಪಾಲಿನ ಕರ್ತವ್ಯ ಮಾಡಬೇಕು.

ದೇಶವು ಸ್ವತಂತ್ರವಾಯಿತು ಎಂಬುದಕ್ಕೆ ಯೋಗ್ಯ ಆರ್ಥಿಕ ಬೊರೆಯಬೇಕಾದರೆ ಪ್ರಜೆಗಳು ಸ್ವತಂತ್ರರಾಗಿರಬೇಕು. ಗುಲಾಮ ಬುದ್ಧಿ, ಪರಾನುಕರಣೆ, ಸ್ವಾರ್ಥ, ಸಂಕೀರ್ಣತೆಗಳು ಪ್ರಜೆಗಳಲ್ಲಿದ್ದರೆ ಆ ದೇಶ ಸ್ವತಂತ್ರವೆನ್ನುವದು ಅಪಾರ್ಥವಾದೀತು. ಸ್ವತಂತ್ರ ಮನೋಭಾವದ ಪ್ರಜೆಗಳಿದ್ದರೆ ಇಂದಲ್ಲ; ನಾಳೆಯಾದರೂ ದೇಶವು ಉತ್ತುಂಗ ಶಿಖರಕ್ಕೇರಿ ಶೋಭಿಸದಿರದು. ಆದ್ದರಿಂದ ದೇಶದ ಘನತೆ ಹಿರಿಮೆಗಳು ಜನತೆಯ ಕೈಯಲ್ಲೇ ಇವೆ.

ಸ್ವತಂತ್ರ ದೇಶದ ಪ್ರಜೆಗಳಾದ ನಾವು ಜವಾಬ್ದಾರಿಯನ್ನರಿತು ದುಡಿಯಬೇಕು. ನನ್ನ ಆರ್ಥಿಕ ಸ್ವಾತಂತ್ರ್ಯವು ಭದ್ರ ತಳಹದಿಯಲ್ಲಿ ನಿಲ್ಲಬೇಕಾದರೆ ದುಡಿಯದೆ ಗತ್ಯಂತರವಿಲ್ಲ. ಆದರೆ ಇದು ಸಾಮರ್ಥಾನದಿಂದ ಆದರೂ ದೇಶಕ್ಕೆ ಹೆಚ್ಚಿನ ತೊಂದರೆಯಿಲ್ಲ. ಆದರೆ ನನ್ನ ಸ್ವಲ್ಪ ವಿಚಾರ ಸ್ವಾತಂತ್ರ್ಯ ಮಾತ್ರ ಇಂದಿನಿಂದಲೇ ಬೇಕು. ನಮ್ಮ ಕುರಿತು ನಂಬುಗೆ, ಮೂಢ ಭಕ್ತಿಗಳನ್ನು ಬಿಡಬೇಕು. ಪ್ರತಿಯೊಂದನ್ನೂ ವಿಚಾರದ ಮೇದಿಕೆಯಲ್ಲಿ ಪರಿಶೀಲಿಸಿ ಸತ್ಯವೆಂದಾ ತೋರಿದ್ದನ್ನು ಮಾಡಬೇಕು. ಈ ವಿಚಾರ ಸ್ವಾತಂತ್ರ್ಯವಿಲ್ಲದ ಜನರಿಗೆ ಯಾವ ಸ್ವಾತಂತ್ರ್ಯವಿದ್ದರೂ ಅವರು ಸ್ವತಂತ್ರರೆನಿಸರು. ಸ್ವತಂತ್ರರೆನಿಸಿದರೂ ಹೆಚ್ಚು ಕಾಲ ಆ ಸ್ಥಿತಿಯನ್ನು ಉಳಿಸಿಕೊಳ್ಳಲಾರರು.

ಬೇರಾವ ಮೂಢ ನಂಬಿಕೆಯಿಲ್ಲದಿದ್ದರೂ ಗಾಂಧೀಜಿ ಹಾಗೆ ಹೇಳಿದ್ದಾರೆ, ನೆಹರೂ ಹೀಗೆ ಹೇಳಿದ್ದಾರೆ ಎಂದು ಅವನ್ನು ವಿಚಾರ ಮಾಡದೆ ಒಪ್ಪುವ, ತಮ್ಮ ಭಾಷಣಗಳಲ್ಲಿ ಅವರು ಹೇಳಿದ್ದನ್ನು ತನ್ನ ಸಮರ್ಥನೆಗೆ ಉಪಯೋಗಿಸುವ ಬುದ್ಧಿನ ಮ್ಮಲ್ಲಿ ಬಹಳ. ನಮ್ಮ ಈ ನಂಬಿಕೆಗೆನ್ನೂರೇ ಹೆವಾಗದ ರೀತಿಯಲ್ಲಿ ನೆಹರೂ ಮುಂತಾದವರಂಥವರು ವರ್ತಿಸುತ್ತಿದ್ದಾರೆ ನಿಜ. ಆಕರೆ ಉಳಿದವರ ಸ್ಥಿತಿ! ಆದ್ದರಿಂದ ನಿಜವಾದ ದೇಶದ ಪ್ರಜೆಯು ತನ್ನ ಅಭಿಪ್ರಾಯವನ್ನು ಈ ರೀತಿ ವ್ಯಕ್ತಿಗಳ ಅಭಿಪ್ರಾಯಕ್ಕೆ ಮೂರ್ಕಾಡದು. ನಿಜವಾದ ಪ್ರಜಾಪ್ರಭುತ್ವದಲ್ಲಿ ಪ್ರಜಾಸ್ವತಂತ್ರ ವಿಚಾರ ಜಾಗೃತಿಯಲ್ಲಿರಬೇಕೇ ವಿನಹ ಎಂಥಾ ಬಲವಾದ ಗೂಟವಾದರೂ ತನ್ನನ್ನು ತಾನೇ ಅದಕ್ಕೆ ಕಟ್ಟಿಹಾಕಿಕೊಳ್ಳಬಾರದು. ಗೂಟಕ್ಕೆ ಕಟ್ಟಿದ ಪಶುವಿಗೆ ಯಾವ ರೀತಿ ಪೂರ್ಣ ಸ್ವಾತಂತ್ರ್ಯವಿರದೋ ಅದೇ ರೀತಿ ಯಾವ ದೇ ಒಬ್ಬ ಮುಂದಾಳಿನ ಅಭಿಪ್ರಾಯವೇ ಸರಿ ಎಂಬ ವಿಚಾರ ಪೂಜೆಗೆ ಬಲಿಯಾದವರ ವಿಚಾರಶಕ್ತಿಯೂ ವಿಕಾಸಗೊಳ್ಳಲು ಸಾಧ್ಯವಿಲ್ಲ. ನ್ಯಾಯ, ನೀತಿ, ಇವುಗಳು ಯಾವ ವ್ಯಕ್ತಿಗೂ ಮುಡಿಪಾದ ಹಕ್ಕಿನ ವಸ್ತುಗಳಲ್ಲ. ಒಡ ಭಿಕ್ಷುಕನ ಮಾತಿನಲ್ಲಿ ಸತ್ಯದ ಝಳಕು ಹೊಳೆಯುವಂತೆನ್ನು ನಿಜವಾದ ವಿಚಾರ ಸ್ವಾತಂತ್ರ್ಯವಿರುವವನು ಕಾಣಬಹುದು. ಆದ್ದರಿಂದ ಮುಂದಾಳುಗಳು ಹೇಳಿದ್ದಾರೆ ಎಂದು ತನ್ನ ವಿಚಾರ ವಾಹಿನಿಯನ್ನು ಹರಿಯಗೊಡದೆ ಮೂಢ ಭಕ್ತಿಯಿಂದ ಯಾರೂ ವರ್ತಿಸಬಾರದು. ಯಾರು ಏನೇ ಹೇಳಲಿ, ಕಡೆಗೆ ಬ್ರಹ್ಮನೇ ಬಂದು ಹೇಳಿದರೂ ಅವರು ಹೇಳಿದ ಮಾತನ್ನು ವಿಮರ್ಶೆಯಿಂದಿರಿಗಲ್ಲಿಗೆ ಹಚ್ಚಿ ಪರಿಶೀಲನೆಯೋಗ್ಯವಾಗಿದ್ದರೆ ಮಾತ್ರ ಅಂಗೀಕರಿಸಬೇಕು.

ಜಗತ್ತಿನ ಯಾವ ಪ್ರಾಣಿಗಳಿಗೂ ವಿಚಾರ ಶಕ್ತಿ ಇಲ್ಲ. ಮನುಷ್ಯನೊಬ್ಬನಿಗೇ ಅದು ಕೊಡಲ್ಪಟ್ಟಿದೆ ಈ ಬುದ್ಧಿಯನ್ನು ಮುಂದಾಳುಗಳೆನ್ನುವವರಿಗೆ ಮಾತ್ರ ದೇವರು ಕೊಟ್ಟಿದ್ದಲ್ಲ; ಪ್ರತಿಯೊಬ್ಬ ವ್ಯಕ್ತಿಗೂ ಪ್ರತ್ಯೇಕ ತಲೆ ಇದೆ. ತಲೆಯಲ್ಲಿ ವಿದ್ಯೆಯಿದೆ. ವಿಚಾರ ಮಾಡುವ ಶಕ್ತಿಯಿದೆ. ಈ ಶಕ್ತಿಯು ಸದುಪಯೋಗ ಮಾಡುವದರಲ್ಲಿಯೇ ಮನುಷ್ಯನ ಘನತೆ ಇದೆ. ಇಂದು ಭಾರತಕ್ಕೆ ದೊರೆತಿರುವ ಪ್ರಜಾಪ್ರಭುತ್ವ ರಾಜ್ಯಾಡಳಿತದ ಉತ್ಕರ್ಷಯೂ ಆ ಮನಸಿಗಳು ಇತರ ಸದುಪಯೋಗದ ತಳಹದಿಯಲ್ಲೇ ನಿಂತಿವೆ.

ಪ್ರಕೃತ ಭರತ ಖಂಡವನ್ನು ಪರಿಶೀಲಿಸಿದರೆ ಈ ವಿಚಾರಸ್ವಾತಂತ್ರ್ಯವನ್ನು ಪಡೆದವರು ಅತಿ ವಿರಳವೆಂದು ವಿಷಾದದಿಂದ ಹೇಳಬೇಕಾಗಿದೆ. ಒಂದೋ ಮುಂದಾಳುಗಳ ವೀರ ಪೂಜೆಯಲ್ಲಿ, ಇಲ್ಲವೇ ಪಕ್ಷಗಳ ತಪ್ಪ ಸಾಧನೆಯಲ್ಲಿ ತಮ್ಮ ವಿಚಾರ ಶಕ್ತಿಯನ್ನು ಕಡೆಗಣಿಸಿ ಕುರುಡು ಬುದ್ಧಿಯಿಂದ ಕುರಿಗಳಂತೆ ವರ್ತಿಸುವ ಇವರನ್ನು ನೋಡಿದರೆ ಸ್ವಾತಂತ್ರ್ಯ ಎಲ್ಲಿ, ಯಾರಿಗೆ ಬಂದಿದೆಯೆಂದು ಪ್ರಶ್ನಿಸಬೇಕಾಗುವದು. ದೇಶದ ಅಧಿಕಾರ ನಡೆಸುವ ಕಾಂಗ್ರೆಸ್ ಪಕ್ಷದಲ್ಲಿ ಪ್ರತಿ ಪ್ರಾಂತದಲ್ಲೂ ಬಿರುಕುಗಳಿವೆ ಇದರಿಂದಾಗಿ ಒಳ ಪಕ್ಷಗಳುಂಟಾಗಿವೆ. ಈ ಒಡಕುಗಳು ಪ್ರಾಂತದ ಜನತೆಯ ಹಿತದ ದೃಷ್ಟಿಯಿಂದ ಹುಟ್ಟಿದವಾಗಿರದೆ ದ್ವೇಷ, ಸ್ಪರ್ಧೆ, ಅಸೂಯೆ, ಸ್ವಾರ್ಥತೆಗಳಿಂದಲೇ ಜನಿಸಿದವಾಗಿವೆ. ವ್ಯಕ್ತಿ ಪ್ರಾಧಾನ್ಯತೆಯನ್ನು ಅಡಿಗೊತ್ತಿ ಸಾರ್ವಜನಿಕ ಮನೋವೃತ್ತಿ ಮೇಲಾಗುತ್ತಿದ್ದರೆ ಸ್ವಾನಕ್ಕಾಗಿ ಮೇಲಾಟವಾಗುತ್ತಿರಲೂ ಇಲ್ಲ; ಎಂದೂ ಒಂದೂಗೂಡದ ಇಬ್ಬಣಾಗಳಾಗುತ್ತಿರಲೂ ಇಲ್ಲ. ಈ ಅನಿಷ್ಟ ಪರಂಪರೆಗೆ ವಿಚಾರ ಸ್ವಾತಂತ್ರ್ಯವಿಲ್ಲದ ಮುಂದಾಳುಗಳ ಹಾಗೂ ಅನುಯಾಯಿಗಳ ಕುರುಡು ಬುದ್ಧಿಯೇ ಕಾರಣ.

ತಮ್ಮ ಪಕ್ಷ ಏನ ಮಾಡಿದರೂ ಅದನ್ನು ನ್ಯಾಯದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸದೆ ಅಂಧರಂತೆ ಅದೇ ಸತ್ಯವೆಂದು ಕಪಿಮುಷ್ಠಿ ಹಿಡಿದು ವರ್ತಿಸುವವರು, ತಾವು ಮುಂದಾಳುಗಳಾಗಿದ್ದು ಒಪ್ಪಿದವರು ಹೇಳಿದ್ದೆಲ್ಲಾ ಸಿದ್ಧಾಂತವೆಂಬಂತೆ ನಂಬುವದರಿಂದ, ತಮ್ಮ ವಿರೋಧ ಪಕ್ಷದವರು ನ್ಯಾಯವನ್ನೇ ಹೇಳಿದರೂ ಕಿವಿಗೊಡದಿರುವದು ಈ ರೀತಿಯ ವಿಚಾರ ಬುದ್ಧಿಯ ಹತ್ಯೆಯಿಂದ ಆಗುತ್ತಿರುವ ಹಾನಿಯು ಸೀಮಾತೀತವಾದದ್ದು. ನಮ್ಮ ಜನಜೀವನದಲ್ಲಿ ಅನುಕೂಲಾಪ್ರವಾಗಿ ವ್ಯಕ್ತಿಪ್ರಭಾವ-ನಾಯಕಾರಾಧನೆ-ವಿಚಾರ ರಹಿತ ಅನುಯಾಯಿತ್ವ-ತುಂಬಿ ಹೋಗಿದೆ. ಪರದಾಸ್ಯದ ಕಾಲದಿಂದ ಇಂದಿನ ವರೆಗೂ ಉಳಿದು ಕೊಂಡಿರುವ ಮನೋವೃತ್ತಿಯಿದು. ನಾಗರೀಕತೆ, ವಿಜಯ ಜ್ಞಾನಗಳ ಬೆಳೆದು ಬಂದಂತೆ ಬುದ್ಧಿ ವಿಕಾಸಗೊಂಡು ದುರ್ಬಾಧ್ಯಸ್ವದ ಆರಾಧನೆ ಆಗಬಾರದೆಂಬ ಬುದ್ಧಿ ಎಚ್ಚರಿಕೆ ಹೇಳುತ್ತಿದ್ದರೂ ಈ "ಪ್ರಪುಂಡು ನಾಯಕತ್ವ" ತಾನೇ ತಾನಾಗಿ ಹಬ್ಬಿರೆ. ಹಳ್ಳಿಯಿಂದ ಹಿಡಿದು ದೆಲ್ಲಿಯ ವರೆಗೂ ಇದು ಇದೆ.

ಪ್ರಜಾರಾಜ್ಯೋದಯದೊಡನೆ ವ್ಯಕ್ತಿಪ್ರಭಾವಕ್ಕಾಧಾರವಾಗಿದ್ದ ವಾತಾವರಣ ನಾಯವಾಗಿದೆ. ರಾಜರುಗಳ ಪ್ರತಾಪಯುಗವನ್ನು ಮುಗಿಸಿಯೇ ಈ ಪ್ರಜಾಯುಗವು ಬಂದಿದೆ. ಈ ಪ್ರಜಾಯುಗದಲ್ಲಿ ಗಾಂಧೀಜಿಯವರಂಥಾ ಅತಿಮಾನುಷ ಮಹಾತ್ಮರನ್ನು ನಿರ್ಮಿಸುವ ಅವಶ್ಯಕತೆ ಇಲ್ಲ. ಪ್ರಜಾರಾಜ್ಯದಲ್ಲಿ ಅಂಥವರು ಉದಯಿಸುವದೂ ಇಲ್ಲ. ವ್ಯಕ್ತಿ ಗಾಂಭೀರ್ಯ, ಘನತೆಗಳು ಸರ್ವಾಧಿಕಾರ ರಾಜ್ಯದಲ್ಲಿ. ಹಿಟ್ಲರನಂಥಾ ನಿರಂಕುಶ ವ್ಯಕ್ತಿಗಳಿಗೆ ರಿಪಬ್ಲಿಕ್ ಭಾರತದಲ್ಲಿ ಸ್ಥಳವಿಲ್ಲ ಸಹಜ. ಆದರೆ ಇಂದಿನ ಭಾರತ ಇನ್ನೂ ಯಥಾರ್ಥ ರಿಪಬ್ಲಿಕ್ ಭಾರತ ಆಗಿಲ್ಲ. ಆ ಕಾರಣವೇ ಇಂದಿನ ಭಾರತದಲ್ಲಿ ಎಲ್ಲೆಲ್ಲೂ ಮುರಿಹಿಟ್ಲರುಗಳ ತುಂಬಿದ್ದಾರೆ. ಇಂಥಾ ಮುರಿಹಿಟ್ಲರನ್ನು ನಾಶಮಾಡುವ ಮಾರ್ಗ ಇಂದು ಭಾರತದಲ್ಲಿಲ್ಲ. ಇದಕ್ಕೆ ಕಾರಣ ಜನತೆಯಲ್ಲಿ ವಿಚಾರ ಸ್ವಾತಂತ್ರ್ಯವಿಲ್ಲದಿರುವದೇ ಇಗಿದೆ. ಏಕೆಂದರೆ ಜನಮತವೆಂಬುದು ಇಂದು ಪ್ರತಿ ವ್ಯಕ್ತಿಯ ಸ್ವತಂತ್ರ ಮನೋಭಾವದ ತಳಪದಿಯಲ್ಲಿ ನಿಂತಿರದೆ ಪರ್ಟಿಪಕ್ಷದ ಕೆಲವು ವ್ಯಕ್ತಿಗಳ ಕಾಲಕಂಕಣಕ್ಕೆ ಬಿಗಿಯಲ್ಪಟ್ಟಿದೆ ಜನಮತದ ಹೆಸರಿನಿಂದ ನಡೆಯುವ ಈ ವ್ಯಕ್ತಿಗಳ ಆಟದಂತೆ ಜನತೆಯೂ ಕಣಿಯನ್ನೆತ್ತಿದೆ.

ರಾಜಶಾಹಿಯ ಕಾಲ ಕಳೆಯಿತು. ನಂತರ ಪೋರಾಟ ಯುಗ ಬಂತು. ಈ ಹೋರಾಟಯುಗದಲ್ಲಿ ವ್ಯಕ್ತಿಗತ ಮಹತ್ವಾಕಾಂಕ್ಷೆ ಬೆಳೆಯಿತು. ಆ ನಂತರ ಪ್ರಜಾರಾಜ್ಯ ಬಂದಿದೆ. ಇದರಲ್ಲಿ ವ್ಯಕ್ತಿಮಹತ್ವಾಕಾಂಕ್ಷೆ ಅಳಿಯುತ್ತಾ ಸಾರ್ವಜನಿಕ ಪ್ರಾಧಾನ್ಯತೆ ಬೆಳೆಯುತ್ತಾ ಹೋಗಬೇಕು. ಆದ್ದರಿಂದ ಜನತೆಗಲೆ ಜಾಗ್ರತೆಗೊಂಡು ವಿಚಾರ ಮತಿಗಳಾದರೆ ಯಥಾರ್ಥ ಪ್ರಜಾರಾಜ್ಯದ ಉದಯ ಈಗಲೇ ಆಗುವದು. ಜನತೆ ಕಣ್ಣು ಮುಚ್ಚಿಕೊಂಡು ವ್ಯಕ್ತಿಪೂಜೆಯಲ್ಲಿ, ಪಾರ್ಟಿತತ್ವದಲ್ಲಿ ಕಾಲಹರಣ ಮಾಡಿದರೆ ನಮ್ಮ ಮಕ್ಕಳು ಮೊಮ್ಮಕ್ಕಳ ಕಾಲದಲ್ಲಾದರೂ ನಿಜವಾದ ಪ್ರಜಾರಾಜ್ಯ ಬಂದೇ ತೀರುವದು.

ದೀನ ಜನಸೇವಾ ಸಂಘ.

ಪೊನ್ನಂಪೇಟೆ ನಾಡಿನ ಘಾತ್ಯೂರು ಗ್ರಾಮದಲ್ಲಿ ಆ ಊರಿನ ಬೆಟ್ಟ ಕುರುಬರ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಲು ಒಂದು ಚಿಕ್ಕ ಶಾಲೆಯನ್ನು ಶ್ರೀ ಪಿ. ಜಿ. ಮಂದ್ಯಪ್ಪಯ್ಯನವರ ಅಧ್ಯಕ್ಷತೆಯಲ್ಲಿ ತೆರೆಯಲಾಗಿದೆ. ಶ್ರೀ ಪಿ. ಎ. ಗಂಗಾಧರಯ್ಯನವರು ಸದ್ರಿ ದಲಿತ ವರ್ಗದ ಮಕ್ಕಳಿಗೆ ಪ್ರತಿ ಭಾನುವಾರ ಬೆಳಿಗ್ಗೆ ಏಳು ಘಂಟೆಯಿಂದ ಎಂಟು ಗಂಟೆವರೆಗೆ ಅಕ್ಷರಾಭ್ಯಾಸ ಮಾಡಲು ಒಪ್ಪಿ ಈ ವರೆಗೆ ವಿದ್ಯಾಭ್ಯಾಸವು ನಡೆಯುತ್ತಿದೆ. ತಂಬೇಕಾದ ದಿನ-೨೫-೫೦ನೇ ಶನಿವಾರ ಸಾಯಂಕಾಲ ಈ ಸಂಘದ ಒಂದು ಸಭೆ ನಡೆಯಿತು. ನಾಡಿನ ಮಹಿಳೆ ಮಹಿಳೆಯರಾಗಿ ಅಂದು ಇನ್ನೂ ೧೦ ಜನ ನೆರೆದಿದ್ದರು. ಪ್ರಥಮದಲ್ಲಿ ಈ ಸಂಘದ ಅಧ್ಯಕ್ಷರು ಈ ಸಂಘದ ಆಶ್ರಯದಲ್ಲಿ ಈಗ ಹದಿನೈದು ಒಕ್ಕಲಿಗರ್ಗದ ಬಾಲಬಾಲಕಿಯರಿಗೆ ವಿದ್ಯಾಭ್ಯಾಸ ಮಾಡುತ್ತಿರುವ ವಿಷಯವನ್ನು, ಇನ್ನು ಮುಂದೆ ಎಲ್ಲಾ ಪಂಗಡದ ಪಯಸ್ಕರಿಗೆ ಸಾಯಂಕಾಲ ಏಳು ಗಂಟೆಯಿಂದ ಒಂದು ಗಂಟೆ ಹೊತ್ತು ಈ ತರಗತಿಗಳಲ್ಲಿ ಅಕ್ಷರಾಭ್ಯಾಸ ಮಾಡುವ ವಿಷಯದಲ್ಲಿ ಎಲ್ಲರೂ ಒಗ್ಗಟ್ಟಾಗಿ ಈ ಸಂಘದ ಧ್ಯೇಯವನ್ನು ಸಾಧಿಸಲು ಸಹಾಯ ಮಾಡಬೇಕೆಂದು ಮನವಿ ಮಾಡಿಕೊಂಡರು. ವಿದ್ಯಾಭ್ಯಾಸ ಮಾಡುತ್ತಿರುವ ಬೆಟ್ಟಿ ಕುರುಬ ಬಾಲಕರಿಂಗ ಪ್ರಾರ್ಥನೆ ಮತ್ತು ಭಜನೆ ನಡೆಸಲ್ಪಟ್ಟನಂತರ ಶ್ರೀ ಗೋಪಾಲದಾಸರು ಹರಿಕಥೆ ಮಾಡಿದರು. ಕಡೆಗೆ ಶ್ರೀ ಪಿ. ಎ. ಗಂಗಾಧರಯ್ಯನವರು ಒಂದಂತೆ ಉಪಸ್ಥಿತರಿಗಳಿಗೂ, ಕರಿದಾಸರಿಗೂ, ಅವರ ಸಂಗಡಿಗರಿಗೂ ವಂದಿಸಿದನಂತರ ಮಂಗಳಾರತಿ ನಡೆದು ಪ್ರಸಾದ ವಿನಿಯೋಗದೊಡನೆ ಸಭೆ ಮುಕ್ತಾಯವಾಯಿತು.

ಹಾಜರಿದ್ದವ.

ಕೊ ಡ ಗು

ತಾ. ೨೫-೨-೧೯೫೦ನೇ ಶುಕ್ರವಾರ

ಔದ್ಯೋಗಿಕ ಶಿಕ್ಷಣ ಕಾಲೇಜು.

ಕೊಡಗಿನ ಯುವಕರಿಗೆ ಔದ್ಯೋಗಿಕ ಶಿಕ್ಷಣದ ಬಗ್ಗೆ ತಕ್ಕ ಏರ್ಪಾಡು ಈವರೆಗೆ ಇಲ್ಲದಿರುವದು ದೊಡ್ಡದೊಂದು ಕೊರತೆಯಾಗಿತ್ತು. ಈ ಲೋಪವನ್ನು ನಿವಾರಿಸಲು ಇಲ್ಲಿ ಒಂದು ಔದ್ಯೋಗಿಕ ಶಿಕ್ಷಣ ಶಾಲೆಯನ್ನು ತೆರೆಯುವಂತೆ ಕೇಂದ್ರ ಸರಕಾರದವರು ನಿಶ್ಚಯಿಸಿದ್ದುದು ಸಂತೋಷದ ವಿಷಯ. ಬರುವ ಎರಡು ವರ್ಷಗಳಲ್ಲಿ ದಕ್ಷಿಣ ಪ್ರದೇಶದಲ್ಲಿ ಎರಡು ಸಾವಿರ ಉಮೇದುವಾರರನ್ನು ಹಲವು ವಿಧದ ಔದ್ಯೋಗಿಕ ಕಲೆಗಳಲ್ಲಿ ತರಬೇತು ಮಾಡಲು ಕೇಂದ್ರ ಸರಕಾರವು ನಿಶ್ಚಯಿಸಿದೆ. ಇದಕ್ಕಾಗಿ ೧೫೦೦ ಜನರು ವಿದ್ಯಾರ್ಥಿಗಳು ಪ್ರಾಂತದಲ್ಲೂ, ೫೫೦ ಜನರು ಕೇರಳ ಯೂನಿವರ್ಸಿಟಿಯಲ್ಲೂ, ಮತ್ತು ೫೫೦ ಮೈಸೂರಿನಲ್ಲಿ ತರಬೇತಾಗುವಂತೆ ಏರ್ಪಾಡಾಗಿದ್ದರೂ, ಕೊಡಗಿನ ಚೀಫ್ ಕಮಿಷನರ ಸೂಚನೆಯ ಮೇರೆಗೆ ಎಷ್ಟಾಯಿತೆಂದು ಎಕ್ಸ್‌ಟೆಂಶನ್ ಎಂಜಿನಿಯರಾಗಿರುವ ರೀಜನಲ್ ಸರ್ಕಲಿನ ಡೈರೆಕ್ಟರರವರಾದ ಶ್ರೀ, ಅಬ್ದುಲ್ ಖಾದರ್ ಇವರ ಶಿಫಾರಸ್ಸಿನಿಂದಲೂ ಕೊಡಗಿನಲ್ಲಿಯೂ ೬೬ ಉಮೇದುವಾರರನ್ನು ತರಬೇತುಮಾಡಲು ವೀರಾಜಪೇಟೆಯಲ್ಲಿ ಬರುವ ಜುಲೈ ತಿಂಗಳಲ್ಲಿ ಒಂದು ಕಾಲೇಜನ್ನು ತೆರೆಯುವ ತೀರ್ಮಾನವಾಗಿರುವದು ಕೊಡಗಿನ ಹಿತದೃಷ್ಟಿಯಿಂದ ಸ್ತುತ್ಯರ್ಹವಾಗಿದೆ. ಈ ಕಾಲೇಜಿನಲ್ಲಿ ಮರ ಕೆಲಸ, ಕಬ್ಬಿಣ ಕೆಲಸ ಮತ್ತು ಜನರಲ್ ಮೆಕಾನಿಕ್ ಎಂಬ ಮೂರು ಟೆಕ್ನಿಕಲ್ ತರಬೇತು ಕ್ಲಾಸುಗಳು, ದರ್ಜಿ ಕೆಲಸ, ಬೆತ್ತ ಬಿದಿರು ಕೆಲಸ ಮತ್ತು ಸ್ಟೆನೋ ಟೈಪಿಂಗ್ ಈ ಮೂರು ಒಕೇಶನಲ್ ತರಬೇತು ಕ್ಲಾಸುಗಳೂ ಇರುವವು. ಒಂದೊಂದು ಕ್ಲಾಸಿನಲ್ಲಿ ಹದಿನಾರು ವಿದ್ಯಾರ್ಥಿಗಳಿರುವರು. ಟೆಕ್ನಿಕಲ್ ತರಬೇತಿನವರಿಗೆ ಒಂದೂವರೆ ವರ್ಷ ಶಿಕ್ಷಣವೂ ಮತ್ತು ಆರು ತಿಂಗಳು ಹೊರಗಿನ ಫ಼ಂಕ್ಷೆಗಳಲ್ಲಿ ಪ್ರತ್ಯಕ್ಷ ಕಾರ್ಯಾನುಭವದ ತರಬೇತೂ, ಒಕೇಶನಲ್ ತರಬೇತಿನವರಿಗೆ ಒಂದು ವರ್ಷದ ಶಿಕ್ಷಣವೂ ಕೊಡಲ್ಪಡುವುದು. ಒಟ್ಟು ೬೬ ವಿದ್ಯಾರ್ಥಿಗಳಲ್ಲಿ ೪೪ ಜನರಿಗೆ ತಿಂಗಳಿಗೆ ೫೫ ರೂಪಾಯಿಗಳಂತೆ ವಿದ್ಯಾರ್ಥಿವೇತನ ದೊರೆಯುವದು. ಇವುಗಳಲ್ಲಿ ಹನ್ನೆರಡು ಸ್ಥಳಗಳು ಹಿಂದುಳಿದ ವರ್ಗದವರಿಗೆ ಕೊಡಲ್ಪಡುವವು. ಸ್ಟೆನೋ ಟೈಪಿಂಗಿಗೆ ಸ್ಕೂಲ್ ಫೈನಲ್ ಪಾಸಾದವರಾಗಬೇಕೆಂದೂ, ಉಳಿದುದಕ್ಕೆ ಸಾಲ್ಮನೇ ಫಾರಂ ಪಾಸಾದವರಾಗಬೇಕೆಂದೂ ವಿದ್ಯಾಯೋಗ್ಯತೆಯು ನಿಶ್ಚಿತವಾಗಿದೆ. ಇದಕ್ಕೆರುವ ಕಟ್ಟಡ ಏರ್ಪಡಿಸುವದು ಮಾತ್ರ ಸ್ಥಳೀಯ ಸರಕಾರದ ಜವಾಬ್ದಾರಿಯಾಗಿದ್ದು—ವೀರಾಜಪೇಟೆ ಹುಡುಗರ ಬೋರ್ಡಿಂಗ್ ಕಟ್ಟಡವನ್ನು ಆಸಕ್ಕಾಗಿ ನಿಶ್ಚಯಿಸಲಾಗಿದೆ—ಉಳಿದ ಎಲ್ಲಾ ಖರ್ಚನ್ನು ಕೇಂದ್ರ ಸರಕಾರವು ನಿರ್ವಹಿಸುವದೆಂದು ನಿರ್ಣಯವಾಗಿದೆ.

ಔದ್ಯೋಗಿಕ ಶಿಕ್ಷಣದ ಅನಶ್ಯಕತೆ ಮತ್ತು ಪ್ರಯೋಜನದ ವಿಚಾರ ಜನರಿಗೆ ತಿಳಿಯದ್ದಲ್ಲ. ಇಂಥಾ ಸಂಸ್ಥೆಯ ಭಾಗ್ಯವು ಕೊಡಗಿನವರಿಗೆ ಲಭಿಸಿದ್ದು ಮಹತ್ವದ ವಿಷಯವಾಗಿದೆ. ಈ ಕಾಲೇಜಿಗೆ ಬೇಕಾದ ಎಲ್ಲಾ ಉಮೇದುವಾರರನ್ನು ಒದಗಿಸಲು ಸಾರ್ವಜನಿಕರು ಸಹಕರಿಸಿ ಈ ಸಂಸ್ಥೆಯು ಸಂಪೂರ್ಣ ಪ್ರಯೋಜನವನ್ನು ಹೊಂದುವರಾಗಿ ಆಶಿಸುತ್ತೇವೆ.

ವರ್ತಮಾನ.

ಮಡಿಕೇರಿ ಮಹಿಳಾ ಸಹಕಾರ ಸಮಾಜದ ಹೊಸ ಕಟ್ಟಡದ ಶಂಕುಸ್ಥಾಪನಾ ಉತ್ಸವವು ಮಾರ್ಚಿ ತಾ. ೨೬ನೇ ಗುರುವಾರ ಕೊಡಗಿನ ಚೀಫ್ ಕಮಿಷನರಾದ ಸಿ. ಟಿ. ಮೊದಲಿಯಾರವರಿಂದ ನಡೆಯುವದು.

ಬರುವ ಮಾರ್ಚಿ ತಾರೀಕು ಒಂದರಿಂದ ವೆಲ್ಲೂರಿನಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ತರಬೇತಿಗೆ ಶ್ರೀಗಳಾದ ಎಂ. ಪಿ. ಕಾವೇರಪ್ಪ ಮತ್ತು ಎಂ. ಎಸ್. ಬೋಜಪ್ಪ ಇವರುಗಳನ್ನು ಆರಿಸಲಾಗಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ದೇವೀ ಡಿಬೇಟಿಂಗ್ ಸೊಸೈಟಿಯು ಆಶ್ರಯದಲ್ಲಿ ಪಾರ್ಲಿಮೆಂಟರೀ ಪದ್ಧತಿಯ ಚರ್ಚೆಯೊಂದು ತಾರೀಕು ೨೨-೨-೫೦ರಲ್ಲಿ ನಡೆಯಿತು. "೨೦೦ ವರ್ಷಗಳ ಬ್ರಿಟಿಷ ಆಡಳಿತವಿಂದ ಹಿಂದೂಸ್ಥಾನಕ್ಕೆ ಶ್ರೀಮಂತಸ್ಥಾನಗಿಲ್ಲ"ವೆಂಬ ವಿಚಾರ ಚರ್ಚೆಸಲಾಯಿತು. ಹಿಂದೂಸ್ಥಾನಕ್ಕೆ ಶ್ರೀಮಂತಸ್ಥಾನಗಿದೆ ಎಂದು ನಿರ್ಣಯವಾಯಿತು. ಕೊಡಗಿನ ಅಸಿಸ್ಟೆಂಟ್ ಕಮಿಷನರಾದ ಶ್ರೀ ಎನ್. ಸಿ ಸುಬ್ಬಯ್ಯನವರು ಸ್ವೀಕರಿಂಗಿಸಿದರು.

ಬೆಂಬಯಿಯಲ್ಲಿ ನಡೆದ ಅಖಿಲ ಭಾರತ ಗಳ ನೇ ಒಲಂಪಿಕ್ಸ್ ಅಟೋಟಗಳಲ್ಲಿ ಭಾಗವಹಿಸಲು ಶ್ರೀ ಪುಲಿಯಂಡ ಸಣ್ಣಪ್ಪನವರು ಆರಿಸಲ್ಪಟ್ಟಿದ್ದು ತಾ. ೧೯ರಲ್ಲಿ ಅದರಲ್ಲಿ ಭಾಗವಹಿಸುವರೆ ದೆಲ್ಲಿಗೆ ಹೋಗಿರುವರು.

ಸುರಾಯಿ ಮತ್ತು ವಿದೇಶ ಪಾನೀಯಗಳ ಬಗ್ಗೆ ರೇಶನ್ ಕಾರ್ಡಿಗೆ ಅರ್ಜಿ ಬರೆಸಿಕೊಳ್ಳುವ ಅವಧಿಯನ್ನು ತಾರೀಕು ೧೫-೩-೫೦ ರವರೆಗೆ ಮುಂದೂಡಲಾಗಿದೆ.

ತಾರೀಕು ೧೬-೩-೫೦ರ ರಾತ್ರಿ ಇಪ್ಪು ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣಮೂರ್ತಿ ಎಂಬವರು ದೇವರ ಭಂಡಾರದಿಂದ ಸುಮಾರು ೧೭ ರೂಪಾಯಿಗಳನ್ನೂ, ಕೆಲವು ಬೆಳ್ಳಿಯ ಸಾಮಾನುಗಳನ್ನೂ, ಅವರಪ್ಪನಿಂದಲೂ ಇತ್ತೀಚಿಗೆ ಅವರನ್ನು ಪೋಲೀಸರು ಪತ್ತೆಹಚ್ಚಿ ಸಪ್ತಗಿಯಾಗಿ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆಯೆಂದೂ ತಿಳಿದು ಬರುತ್ತದೆ.

ಶ್ರೀ ಸಿ ಎಂ. ಅಪ್ಪಚ್ಚು ದೇವಯ್ಯ ನೆನೆನಂರಿಯಲ್ ಕ್ರಿಕೆಟ್ ಟೂರ್ನಮೆಂಟು ಕಾರ್ಯಕ್ರಮಾನುಸಾರ ಮಡಿಕೇರಿ ಸ್ಪೋರ್ಟ್ಸ್ ಕ್ರಿಕೆಟ್ ಮೈದಾನದಲ್ಲಿ ಪ್ರಾರಂಭವಾಗುವದು.

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನ ಮದರಾಸು ರೀಜನಲ್ ಡೈರೆಕ್ಟರಾದ ಶ್ರೀ ಅಬ್ದುಲ್ ಖಾದರ್‌ರವರು ಔದ್ಯೋಗಿಕ ಶಿಕ್ಷಣ ಶಾಲೆಯ ಪ್ರಯೋಜನವನ್ನು ವಿವರಿಸಿ ಅಂಥಾ ಶಾಲೆಯೊಂದನ್ನು ಇಡಿಯೂ ಸರಕಾರದ ಖರ್ಚಿನಿಂದಲೇ ವೀರಾಜಪೇಟೆಯಲ್ಲಿ ಬರುವ ಜುಲೈ ತಿಂಗಳಲ್ಲಿ ಸ್ಥಾಪಿಸಲಾಗುವದೆಂದು ತಾರೀಕು ೧೭ರಲ್ಲಿ ವೀರಾಜಪೇಟೆ ಹೈಸ್ಕೂಲಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಮೈಸೂರು ಮಹಾರಾಜಾ ಕಾಲೇಜಿನ ಇಂಗ್ಲಿಷ್ ಪ್ರೊಫೆಸರಾದ ಶ್ರೀ ಎಚ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆ ಹೈಸ್ಕೂಲಿನ ಶತಾಬ್ದಿನೋತ್ಸವವು ತಾರೀಕು ೧೭ರಲ್ಲಿ ನಡೆಯಿತು. ಶಾಲಾ ಮುಖ್ಯೋಪಧ್ಯಾಯರಾದ ಶ್ರೀ ಎಂ. ಎ ಚಂಗಪ್ಪನವರು ಶಾಲಾ ವರದಿಯನ್ನು ಓದಿದನಂತರ ಪಾಠ ಪ್ರವಚನಗಳಲ್ಲೂ, ಆಟೋಟಗಳಲ್ಲೂ ಪ್ರಥಮ ಬಂದವರಿಗೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ವಿದ್ಯಾರ್ಥಿಗಳ ಶಿಕ್ಷಣ ವಿಚಾರ ಬೋಧಪ್ರದ ಭಾಷಣ ಮಾಡಿದರು. ರಾತ್ರಿ ಎಂಟೂವರೆ ಗಂಟೆಯ ನಂತರ ನಾಟಕಗಳೂ ವಿನೋದ ಕೂಟಗಳೂ ನಡೆದವು.

ಮೈಸೂರು ಮಹಾರಾಣಿ, ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಟಿ. ಕೆ. ಶಾರದ ನವರು ಸದರಿ ಕಾಲೇಜು ದಿನ ಆಟೋಟದಲ್ಲಿ ಹಲವು ವೈಯುಕ್ತಿಕ ಬಹುಮಾನಗಳನ್ನು ಗೆದ್ದಿರುವದಲ್ಲದೆ ಚೇಂಪಿಯನ್‌ಷಿಪ್ ಫೀಲ್ಡ್‌ನ್ನೂ ಗೆದ್ದಿರುವರು.

ಕಳೆದ ಆದಿತ್ಯವಾರದಿಂದ ದೇಶದ ಹಲವು ಭಾಗಗಳಿಗೆ ಮಳೆ ಬಿದ್ದಿದೆ. ಈ ಮೂರು ದಿನಗಳಲ್ಲಿ ವಿವಿಧ ಭಾಗಗಳಿಗೆ ೪ ಇಂಚಿನಿಂದ ೫ ಇಂಚುಗಳ ವರೆಗೆ ಮಳೆಯಾಗಿದೆ.

ಮದರಾಸಿನಲ್ಲಿ ನಡೆದ ರೀಜನಲ್ ಫುಡ್ ಕಾನ್‌ಫರೆನ್ಸಿಗೆ ತಾ. ೧೯ ರಲ್ಲಿ ಹೋಗಿದ್ದ ಚೀಫ್ ಕಮಿಷನರು ತಾ. ೨೫ರಲ್ಲಿ ವಾಪಾಸು ಬಂದಿರುವರು.

ಶಾಂತಿ ಎಲ್ಲಿ?

ಯುದ್ಧ ಕಳೆದು ಜಗತ್ತಿನಲ್ಲಿ ಶಾಂತಿ ಸಂಸ್ಥಾಪಿಸಲ್ಪಟ್ಟು, ಜಗದ ಜನಜೀವನ ಸುಖಮಯವಾಗುವದೆಂದು ಕನಸು ಕಟ್ಟಿದವರೆಲ್ಲರ ಆ ಸವಿಕಲ್ಪನೆ ಕೇವಲ ಗಾಳಿಗೋಪುರವೆಂದು ದಿನದಿಂದ ದಿನಕ್ಕೆ ಜಗತ್ತಿನ ರಾಜಕೀಯರಂಗದಲ್ಲಿ ಆಗುವ ಘಟನೆಗಳಿಂದ ಸ್ಪಷ್ಟವಾಗುತ್ತಿದೆ.

ಯುದ್ಧ ಮುಗಿಯಲು ಪರಮಾಣು ಬ್ಹಾಂಬೇ ಪ್ರಾಮುಖ್ಯವಾದ ಕಾರಣವಾಯಿತು. ಆದರೆ ಪರಮಾಣು ಬಾಂಬಿನ ಕಾರಣ ವಿಶ್ವವ್ಯಾಪ್ತ ಯುದ್ಧ ಮುಗಿದರೂ ಜಗತ್ತಿನಲ್ಲಿ ಯುದ್ಧ ನಿಲ್ಲಲಿಲ್ಲ. ಇಂದೂ ಕೂಡ ವಿವಿಧ ಭೂಪ್ರದೇಶಗಳಲ್ಲಿ ಚಿಕ್ಕ ಪರಿಮಾಣದಲ್ಲಿ ನಡೆದಿದೆ. ಪರಮಾಣು ಬಾಂಬಿನ ಬೆದರಿಕೆಯನ್ನು ಅಮೇರಿಕವು ಜಗತ್ತಿಗೆ ಹಾಕಿ ಅದರ ಬಲದಿಂದ ಜಗತ್ತಿನ ಶಾಂತಿ ಸಂಸ್ಥಾಪನಾಯತ್ನ ಮಾಡಿತು. ಆದರೆ ಕೆಲವೇ ಸಮಯದಲ್ಲಿ ರಷ್ಯಾವು ಪರಮಾಣು ಬಾಂಬು ತಯಾರಿಸಿ ತನ್ನ ಸಿದ್ಧತೆಯನ್ನು ತೋರಿಸಿತು. ರಷ್ಯಾದ ಕೈಯಲ್ಲೂ ಪರಮಾಣು ಬಾಂಬು ಇರುವ ಪ್ರಯುಕ್ತ ಜಗತ್ತಿನ ಶಾಂತಿ ಸಾಧ್ಯವಾಗಬಹುದೆಂದು ಅನೇಕ ಮುತ್ಸದ್ದಿಗಳು ನಂಬಿದ್ದರು. ಆದರೆ ಇತ್ತಲಾಗಿ ಅಮೇರಿಕವು 'ಹೈಡ್ರೋಜನ್ ಬಾಂಬು' 'ಜಲಜನಕ ಬಾಂಬು' ಎಂದು ಹೊಸದೊಂದು ಬಾಂಬನ್ನು ತಯಾರಿಸಿ ಜಗತ್ತನ್ನು ಬೆರಗುಗೊಳಿಸಿದೆ. ಈ ಹೊಸ ಬಾಂಬು ಆಣುಬಾಂಬಿಗಿಂತಾ ಒಂದು ಸಾವಿರ ಪಾಲು ಹೆಚ್ಚು ವಿನಾಶಕಾರಿಯೆಂದೂ, ಒಂದು ಬಾಂಬಿನಿಂದ ನೂರು ಚದರ ಮೈಲಿನ ಸ್ಥಳವು ಭಸ್ಮವಾಗುವದೆಂದೂ ಹೇಳಲಾಗಿದೆ. ಒಂದು ಬಾಂಬಿನ ತಯಾರಿಗೆ ೪೦೦ ಕೋಟಿಯ ವರೆಗೆ ರೂಪಾಯಿ ವೆಚ್ಚವಾಗಬಹುದೆಂದು ಹೇಳಲಾಗಿದೆ. ಅಮೇರಿಕದ ಅಧ್ಯಕ್ಷ ಟ್ರೂಮನರು ಇಂಥಾ ಬಾಂಬುಗಳ ತಯಾರಿಗೆ ಅಜ್ಞೆ ಇತ್ತಿದ್ದಾರೆ.

ಜಗತ್ತಿನ ಕಾರ್ಯಕಲಾಪಗಳನ್ನು ನೋಡಿದರೆ ಜಗತ್ತು ಎರಡು ಭಾಗವಾಗಿದೆಯೆಂದು ಹೇಳಬಹುದು. ಒಂದು ಪಕ್ಷವು ಅಮೇರಿಕೆಯ ಕಡೆಗೂ ಮತ್ತೊಂದು ರಷ್ಯಾದ ಕಡೆಗೂ ಇದೆ. ಇವೆರಡು ಶಕ್ತಿಗಳ ತಿಕ್ಕಾಟ ಅಂತರಾಷ್ಟ್ರೀಯ ಪ್ರತಿಯೊಂದು ಕ್ಷೇತ್ರದಲ್ಲಿ ಕಂಡು ಬರುವದನ್ನು ಇವೆರಡೂ ಕೂಡ ಸಾಧ್ಯವಾದ ಸಂಘಟನೆಗಳನ್ನು ಮಾಡಿಕೊಳ್ಳುತ್ತಿವೆ. ಇವೆರಡೂ ಮುಂದಿನ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತವೆ. ರಷ್ಯಾವು ಕ್ರಮಶಃ ವಿಸ್ತಾರಗೊಳ್ಳುತ್ತಾ ಯೂರೋಪಿನಲ್ಲಿ ಜರ್ಮನಿಯವರೆಗೆ ತಲುಪಿ ಚಾಚಿದೆ. ಇತ್ತ ಪೂರ್ವದಲ್ಲಿ ಜಗತ್ತಿಗೇ ವಿಶಾಲವೂ ಜನಭರಿತವೂ ಆದ ಚೈನಾವನ್ನೂ ತನ್ನಾಶ್ರಯದಲ್ಲಿ ಪಡೆದು ಬೃಹದಾಕಾರದಲ್ಲಿ ಬೆಳೆದಿದ್ದಾನೆ. ಅಮೇರಿಕವು ತನ್ನ ದುಡ್ಡಿನ ಬಲದಿಂದ ಅನೇಕ ರಾಷ್ಟ್ರಗಳನ್ನು ತನ್ನ ಶಿಬಿರದಲ್ಲಿ ಸೇರಿಸಿಕೊಂಡಿದೆ. ಈ ರೀತಿ ಮತ್ತೊಂದು ಮಹಾ ಯುದ್ಧದ ಪೂರ್ವ ಸಿದ್ಧತೆಯಾಗುತ್ತಿದೆ.

ಅಮೇರಿಕೆಯು ಹೈಡ್ರೋಜನ್ ಬಾಂಬು ತಯಾರಿಸುತ್ತಿರುವದರಿಂದ ರಷ್ಯಾವು ಹೆಚ್ಚು ಗಾಬರಿಗೊಂಡಂತೆ ತೋರುವದಿಲ್ಲ. ಅದೂ ಕೂಡ ಇದರ ತಯಾರಿಗೆ ತೊಡಗಿದೆಯೆಂದು. ಆದ್ದರಿಂದ ದಿನ ಕಳೆದಂತೆ ಅತಿ ಭೀಕರ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾಗಿ ರಾಷ್ಟ್ರಗಳು ರಣರಂಗಕ್ಕಿಳಿಯಲು ಸಿದ್ಧವಾಗುತ್ತಿವೆ.

ಇಂಥಾ ಪರಿಸ್ಥಿತಿಯಲ್ಲಿ ಜಗತ್ತಿನ ಶಾಂತಿಯು ಮಾತಿರಲಿ, ಜಗತ್ತಿಗೆ ಉಳಿಗಾಲವಿಲ್ಲವೇ ಎಂಬುದು ಪ್ರಶ್ನೆಯಾಗಿದೆ. ಏಕೆಂದರೆ ಜಲಜನಕ ಬಾಂಬಿನ ಅನಿಷ್ಟ ಪರಿಣಾಮಗಳನ್ನು ವಿವರಿಸುತ್ತಾ ಜಗತ್ತಿನ ಕೀರ್ತಿವೆತ್ತ ವಿಜ್ಞಾನಿಗಳಾದ ಆಲ್ಬರ್ಟ್ ಐನ್‌ಸ್ಟೀನರು ಇವರಿಂದ ಜಗತ್ತಿನ ಜೀವ ಜಂತುಗಳೆಲ್ಲವೂ ನಾಶವಾಗುವ ಸಂಭವವಿದೆಯೆಂದು ಹೇಳಿರುವರು. ಈ ಜಲಜನಕ ಬಾಂಬಿನಿಂದ ವಾಯುಮಂಡಲವು ವಿಷಪೂರಿತವಾಗುವದೆಂದೂ ಅವರು ಹೇಳಿದ್ದಾರೆ. ವಾಯುಮಂಡಲವು ವಿಷಪೂರಿತವಾದ ಮೇಲೆ ಜಗತ್ತು ಬದಕುವ ಸಾಧ್ಯತೆ ಎಲ್ಲಿ? ವಿಜ್ಞಾನವು ಮನುಷ್ಯನನ್ನು ಎಲ್ಲಿಗೆ ತಲಪಿಸುವದೋ ತಿಳಿಯದು ಮನುಷ್ಯ ಕುಲವು ಯಾದವ ಕುಲದಂತೆ ತಮ್ಮ ತಮ್ಮೊಳಗೆ ಬಡಿದಾಡಿ ಸರ್ವನಾಶ ಮಾಡುವ ದಿನ ಸನ್ನಿಹಿತವಾಗುತ್ತಿದೆಯೆನ್ನಬಹುದು.

ದೀರ್ಘಾಯುಷ್ಯದ ಗುಟ್ಟು

ಲೇ:– ಶ್ರೀ ಎನ್. ಎಸ್. ಗದಗಕರ, ಬಿ. ಎ.

ಬಹುದಿನ ಬಾಳಬೇಕೆಂಬ ಬಯಕೆ ಎಷ್ಟು ಹಿರಿದು! ಹಸ್ತಸಾಮುದ್ರಿಕನ ಮುಂದೆ ಕೈ ಚಾಚಿದಾಗ ನೀವು ಮೊದಲು ಹಾಕುವ ಪ್ರಶ್ನೆ ಎಂದರೆ–'ನಾನು ಎಷ್ಟು ವರ್ಷ ಬಾಳುವೆ?' ಇದೀಗ ಹುಟ್ಟಿದ ಮಗುವಿನ ಕುಂಡಲಿ ಹಾಕುವವನೂ ಈ ಪ್ರಶ್ನೆಗೇ ಉತ್ತರ ತೆಗೆಯುವನು. ಎಷ್ಟೇ ಜನರೆಂತೂ ಚಿರಾಯುವಾಗಬೇಕೆಂದು ಒಂದಿಲ್ಲೊಂದು ರೀತಿಯಿಂದು ಯೋಚಿಸುತ್ತಿರುವರು.

ಚಿರಾಯುಷ್ಯನ ರಹಸ್ಯವು ತೀರ ಸಾಮಾನ್ಯ ಸಂಗತಿಗಳಲ್ಲಿಯೂ ಹುದುಗಿದೆ. ಆದರೆ ಆ ಉಪಾಯಗಳಲ್ಲಿ ಎಂತಹ ವಿರೋಧ, ವೈವಿಧ್ಯ! ಅಂತೇ ಯಾವನಾದರೊಬ್ಬ ವಿದ್ವಾಂಸನು ನಿಶ್ಚಿತ ಸೂತ್ರ ಕಂಡು ಹಿಡಿಯಲು ಅಸಮರ್ಥನಾಗಿರುವನೆಂದು ಹೇಳಬೇಕು. ಏನೇ ಆಗಲಿ, ಇಂತಹ ಅಸಂಖ್ಯ ಉಪಾಯಗಳು ಸವೀನವೆನಿಸುವಲ್ಲಿ ತಕ್ಕ ಮಟ್ಟಿಗೆ ಮನರಂಜನೆ ಉಂಟು ಮಾಡುವವು.

ಮೊನ್ನೆ ಮೊನ್ನೆ ವರ್ತಮಾನ ಪತ್ರದಲ್ಲಿ ಓದಿದ ಒಂದು ವಿಚಿತ್ರ ಸಂಗತಿ ನೆನಪಿಗೆ ಬರುವದು. ಬ್ರಹ್ಮದೇಶದಲ್ಲಿ ಒಬ್ಬನು ೧೦೯ ವರ್ಷ ಬಾಳಿ ಸತ್ತನಂತೆ. ಆತನ ಏಳನೇ ಹೆಂಡತಿಗೆ ಆಗ ಆತ ವರ್ಷಗಳು. ಪಕ್ಕಳು ಮೊನ್ಮಕ್ಕಳು ಒಟ್ಟು ೩೬! ಹೀರ ಸಾತ್ವಿಕ ಜೀವನವವನದು. ತಪ್ಪಿಯೂ ಯಾರೂ ಬಾಯಿಗೆ ಸೆರೆ ಹಚ್ಚಿದವನಲ್ಲ. ಇಷ್ಟರ ಮೇಲಿಂದಲೇ ಬ್ರಹ್ಮಚಾರಿಗಳು ತೀರ್ಪು ಸಾಯುವರು; ಹೆಚ್ಚು ಸಲ ಲಗ್ನವಾದವರು ಹೆಚ್ಚು ವರ್ಷ ಬಾಳುವರು ಎಂದು ಅವಸರ ಅವಸರವಾಗಿ ಶರ ಹಾಕಲಾಗದು!

ಊಟದ ನಿಯಂತ್ರಣ, ಸಾಧ್ಯವಿದ್ದಷ್ಟು ಕಡಿಮೆ ದುಶ್ಚಟಗಳು–ಇವೇ ದೀರ್ಘಾವಧಿ ಬಾಳಿನ ಸೂತ್ರಗಳೆಂಬಲ್ಲಿ ತಥ್ಯ ವಿದೆ. ಈಗ ೬೩ ವರ್ಷವಯನಾದ ಜಾರ್ಜ್ ಶಾ ಎಂಬ ಪ್ರಸಿದ್ಧ ಆಯರಿಶ್ ನಾಟಕಕಾರನದೂ ಇದೇ ವಿಚಾರ. ಮೊಂಸ ಮುಟ್ಟಕೂಡದು, ಮೂದಕ ಪೇಯ ಅನವಶ್ಯಕ, ವೈದ್ಯರೆಂದರೆ ಕೇವಲ ಗೆಳೆಯರಂತೆ ಇರುವದು–ಇವೇ ಅವನ ಉಪದೇಶಾಮೃತದ ಮುಖ್ಯ ಅಂಗಗಳು. ಮನುಷನು ೩೦೦ ವರ್ಷ ಬಾಳಲು ಸಾಧ್ಯವಿದೆ ಎಂದು ಶಾನ ವಿಶ್ವಾಸ! ಸ್ವತಃ ತನಗಾದರೂ ಭಗವಂತನು ಉದ್ದಂಡ ಆಯುಷ್ಯ ದಯಪಾಲಿಸಲಿ ಎಂದು ಉತ್ಕಟ ಅಭಿಲಾಷೆ. ಮಹಾತ್ಮಾ ಗಾಂಧಿಯವರ ಉಪದೇಶ ಬಾಪೂರವರೂ ಸಾಮಾನ್ಯವಾಗಿ ಇದೇ ಮಾದರಿಯದಾಗಿದ್ದಿತು. ಅತಿ ಮಿತಿಯಿಂದ ಅವರ ಊಟ. ವೈದ್ಯರಲ್ಲಿ ಕಿಂಚಿತ್ ಶ್ರದ್ಧೆ ಇಲ್ಲ. ಅವರಿಗೆ ೧೦೫ ವರ್ಷ ಬಾಳುವ ಆಪೇಕ್ಷೆ ಇದ್ದಿತು. ಬಹುತರವಾಗಿ ಅವರ ಬುಕವಾಸಾದಿ ವೃತಗಳೇ ಹೊಸ ಚೈತನ್ಯ ಹುಟ್ಟಿಸಲು ಸಾಕು. ತಮ್ಮ ಸಾಹಸ ಪ್ರಯೋಗಗಳಿಂದ ಅವರು ಸಾಮಾನ್ಯ ವಿಹಂಚನೆಗೆ ಈಡು ಮಾಡಿದ್ದರು. ವೈದ್ಯರಿಗೂ ಇದೆಲ್ಲ ರಹಸ್ಯಾತ್ಮಕವೆನಿಸಿದ್ದೀತು! ಆದರೆ ಎಷ್ಟು ಜನರಿಗೆ ಇಂತಹ ಮಹಾನು ಭಾವರ ಜೀವನ ಕ್ರಮ ಒಗ್ಗೀತು ಎಂದು ಹೇಳುವದು ಕಠಿಣವೇ. ಅಮೇರಿಕೆಯ ಸುಪ್ರಸಿದ್ಧ ಪತ್ರಿಕಾ ವ್ಯವಸಾಯಿಗಳಾದ ಲುಯಿ ಫಿಶರರು ಒಮ್ಮೆ ಸೇವಾಗ್ರಾಮಕ್ಕೆ ಹೋಗಿ ಮಹಾತ್ಮಾಜಿಯವರ ಅತಿಥಿಗಳಾಗಿ ಉಳಿದಿದ್ದರು. ಪ್ರತಿದಿನ ಮುಂಜಾವು ಸಂಜೆಗೆ ಫಿಶರರಿಗೆ ಆನೇ ಕಾಯಿಪಲ್ಯೆ, ಮಸಾಲೆಯು ಪಥ್ಯಗಳು ಊಟದಲ್ಲಿ! ಅವರಿಗೆ ಬೇಜಾರ ಬಂದಿತು. ಪಲ್ಯೆ ಆರೋಗ್ಯಕ್ಕೆ ಅತ್ಯುತ್ತಮವೆಂದು ಮಹಾತ್ಮಾಜಿಯವರು ಹೇಳುತ್ತಿದ್ದರೂ ಫಿಶರರು ನುಡಿದರು ಹೀಗೆ "ಮಹಾತ್ಮಾಜಿ, ನಿಮ್ಮದು ಆ ವರ್ಷ ಜೀವನ. ಪ್ರಸಿದ್ಧ ರಾಜಕಾರಣಿಗಳೂ ಮುಖಂಡರೂ ನೀವು ಹೌದು. ಆದರೆ ಬಡಪಾಯಿಟ್ಟು ಕ್ಷಮಿಸಿರಿ. ಆಹಾರ ವಿಷಯದಲ್ಲಿ ನಿಮ್ಮ ರೀತಿ ನನಗೆ ಸರಿ ಎನಿಸದು."

ಬೆಳ್ಳೊಳ್ಳಿ, ಉರುಳ್ಳಿಗೆಡ್ಡೆ ದೀರ್ಘಾಯುಷ್ಯಕ್ಕೆ ಸಾಧಕಗಳೆಂದು ಹಲವರ ಅಭಿಪ್ರಾಯ. ಮೆಕ್ಸಿಕೋದ ಒಬ್ಬ ಸ್ತ್ರೀ ಇವುಗಳಿಂದಲೇ ೧೨೦ ವರ್ಷ ಬಾಳಿದಳಂತೆ! ಆದರೆ ಬಹು ಜನರಿಗೆ ಇವುಗಳು ವಾಸನೆ ಸರಿ ಹೋಗುವದಿಲ್ಲ. ಮುಸೋಲಿನಿಗೆ ಬೆಳ್ಳೊಳ್ಳಿಗಳಲ್ಲಿ ವಿಶ್ವಾಸ. ಅವನು ದಿನಾಲು ಊಟದಲ್ಲಿ ಹೆಚ್ಚಾಗಿ ಅವನ್ನೇ ಉಪಯೋಗಿಸುತ್ತಿದ್ದನೆಂದು ಕೇಳುವೆವು.

ಅಮೆರಿಕೆಯ ಕುಬೇರನಾದ ರಾಕ್‌ಫೆಲ್ಲರ ೯೭ ವರ್ಷದವನಾದೊಡನೆ ಸತ್ತನು. ಅವನಿಗೆ ಆಗಲೂ ಒಂದು ಹೇಳುಕು ಹಲ್ಲು ಇದ್ದಿಲ್ಲವಂತೆ. ಚಹಾ ಕಾಫಿ ಎಂದರೆ ಅವನಿಗೆ ಬದ್ಧ ದ್ವೇಷ. ಆದರೆ ಎರಡು ಊಟದ ಮಧ್ಯಂತರದಲ್ಲಿ ಯಥೇಚ್ಛ ಕಿತ್ತಳೆ ಹಣ್ಣಿನ ರಸ ಸೇವಿಸುತ್ತಿದ್ದನು. ಅವನದು ಅತಿ ಶಾಂತ ಮನಸ್ಸು. ಹಗಲು ಸ್ವಲ್ಪ ನಿದ್ರೆ. ಎಂದೂ ಸಿಡುಕು ಸ್ವಭಾವ ತಲೆದೋರದಿದ್ದುದು ನಿಜವಾಗಿಯೂ ಆಶ್ಚರ್ಯಕಾರಕ. ಸಿಟ್ಟು ಸೆಡುಕುಗಳಿಂದಲೇ ಆಯುಷ್ಯದ ವಿನಾಶ ಎಂದು ಗಾಂಧೀಜಿಯವರು ನುಡಿಯುತ್ತಿದ್ದುದು ಗಮನಾರ್ಹವಾದುದು.

ಜಗತ್ಪ್ರಸಿದ್ಧ ಹೆಸರಾಂತರ ಜೀವನವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ಒನ್ನೊಮ್ಮೆ ಚಟುಗಳು ಇರಬೇಕೋ ಇರಬಾರದೋ ಎನ್ನುವಲ್ಲಿ ಸಂಶಯ ತಟ್ಟುವಂತಿದೆ. ಆಪರ ಅಭಿಪ್ರಾಯಗಳಲ್ಲಿ ತಾಳಮೇಳಗಳಿಲ್ಲ. ಒಮ್ಮೆ ವಿನ್‌ಸ್ಟನ್ ಚರ್ಚಿಲರು ಫಿಲ್ಡ್ ಮಾರ್ಷಲ್ ಮಾಂಟ್ಗೊಮರಿಯೊಡನೆ ಮಾತಾಡುವಾಗ "ನಿನ್ನ ಆರೋಗ್ಯದ ಗುಟ್ಟೇನು?" ಎಂದು ಕೇಳಿದನು. ಫಿಲ್ಡ್ ಮಾರ್ಷಲ್ ಉತ್ತರಿಸಿದ್ದು ಹೀಗೆ–"ನಾನು ನಸುಕಿನಲ್ಲೆದ್ದು ನಿಯಮಿತ ವ್ಯಾಯಾಮ ಮಾಡುತ್ತೇನೆ. ಸೇದುವದು ಹಾಗೂ ಕುಡಿಯುವದು ಕೇಳಬಾರದು. ಅಂತೇ ನನ್ನ ದೈಹಿಕ ತೊಂದರೆಗಳು ಕಡಿಮೆ. ಚರ್ಚಿಲನು ಮೂರುತ್ತರವಿತ್ತುದು ನಾನು ಫಲುವದು ಅತಿ ತಡ. ಸಮುದ ಸೋಲಕಿಲ್ಲ ಕುಡಿಯುವದು ವದು ಬೇಕಾದಷ್ಟಿದೆ. ಆದಕ್ಕಿಂತಲೂ ನಾನು ನಿರೋಗಿಯಾಗಿ ನಿಜವಾಗಿ ನೋಡಿದರೆ ಚರ್ಚಿಲ್‌ಂಗೆ ಹೇಳುವಾಗ ನುಳ್ಳಿಗೆ ಮೊರೆಗಿಲ್ಲ. ಸೇದುವದು ಕುಡಿಯುವದು ಗಿಇದ್ದೇ ಇದ್ದವು. ಎಲ್ಲಕ್ಕಿಂತ ಹೆಂದರಿ ಅವನಿಗೆ ಅಖಂಡವಾಗಿ ದಾಂವ ಚಟವು ಒಂದು!

ಜರ್ಮನರ ದೃಷ್ಟಿಯಿಂದ ದೀರ್ಘಾಯುಷ್ಯದ ರಹಸ್ಯವು ವಿವಾಹ ಮತ್ತು ದ್ಯನುಗಳಲ್ಲಿ ಹುದುಗಿದೆ. ಆದಬಹು ದಿನ ಬಾಳಿದರೆ ಸೋಮೊಥಿತರು ವದೆಂದು ಉದಾಹರಿಸಬಹುದು. ಲೇಟ್ ಬ್ರಿಟನ್ನಿನ ಹಳ್ಳಿಗಳಲ್ಲಿ ಕೆಲವರು ಆತ್ಯಾಶ್ಚರ್ಯವೆನಿಸುವಷ್ಟು ಕುದುಕುವರಿದ್ದಾರೆ. ಆ ಜನರು ಸೋಮೂರಿಗಳು. ಅಲ್ಲಿ ಯಾವ ಗಾಲ್ಲುವದಿಲ್ಲ. ವಾರಕ್ಕೊಮ್ಮೆ ಬಸ್ಸು ಮಾತ್ರ ಹೋಗುವದು.

ನೂರು ಕಾಲ ಬಾಳಿದ ಬೆಡಿಗಿಡ್ಡದ ತುರ್ಕಿ ಮನುಷ್ಯನೊಬ್ಬನು ತಣ್ಣೀರಿನ ಉಪಾಯ ಕಂಡುಹಿಡಿದಿದ್ದನು. ವಾಯು ಸೇವನೆಗಾಗಿ ಹೊರಡುವ ಮೊದಲು ಒರತೆಯ ನೀರು ಕುಡಿಯುವದು ಅವನ ರೂಢಿ. ಆದರ ಮೂಲಕ ಅವನಿಗೆ ಎಂದೂ ಖಾಯಿಲೆ ಬರಲಿಲ್ಲ. ಎರಡು ಸಲ ತಲೆ ನೋವು ಮಾತ್ರ ಎದ್ದಿತ್ತಂತೆ. ಆದಾದರೂ ಕಡಿಮೆಯಾದುದು ಹೇಗೆ ಗೊತ್ತೆ? ಮತ್ತೆ ನಿರರ್ಗಳವಾಗಿ ತಣ್ಣೀರು ಕುಡಿದಾಗ!

ಇಲ್ಲಿಯವರೆಗೆ ಮುಖ್ಯವಾದ ಎಲ್ಲಾ ಜನರಿಗೆ ಎಲ್ಲ ಕಾಲಗಳಲ್ಲಿ, ಎಲ್ಲ ದೇಶಗಳಲ್ಲಿ ದೀರ್ಘಾಯುಷ್ಯಕ್ಕೆ ಉಪಯುಕ್ತವೆನಿಸುವ ಕೆಲ ಸೂತ್ರಗಳು ಗೊತ್ತಾದುದು ಸರಿ. ಆದರೆ ಎಷ್ಟು ಜನರಿಗೆ ದೀರ್ಘಾಯುಷ್ಯದ ಮಮತೆ ಇರುವದೋ! ಒಟ್ಟು ಹಾಗೆ ಮಾಡಬಾರದು, ಹೀಗೆ ಮಾಡಬಾರದು ಎಂಬ ಕಟ್ಟಳೆ ಆತಿಯಾದಲ್ಲಿ ಜೀವನ ವಿರಸವಾಗಿ ಪರಿಣಮಿಸುವದರಲ್ಲಿ ಸಂಶಯವಿಲ್ಲ.

(ಒಂದು ಆಂಗ್ಲ ಲೇಖನದ ಆಧಾರದಿಂದ)

'ಸಂಜೀವನ'

ಶರತ್ ಚಂದ್ರಬೋಸರ ನಿಧನ

ಸುಪ್ರಸಿದ್ಧ ರಾಷ್ಟ್ರೀಯ ಮುಂದಾಳೂ, ನೇತಾಜಿ ಸುಭಾಶ ಚಂದ್ರಬೋಸರ ಸಹೋದರರೂ ಆದ ಶ್ರೀ ಶರತ್ ಚಂದ್ರ ಬೋಸರವರು ತಾ. ೨೦ ರಲ್ಲಿ ತಮ್ಮ ಕಲ್ಕತ್ತಾ ಭವನದಲ್ಲಿ ಸ್ವರ್ಗಸ್ಥರಾದರು. ಶರತ್ ಚಂದ್ರರು ಕಳೆದ ಕೆಲವು ದಿನಗಳಿಂದ ಕಾಯಿಲೆಯಿಂದ ನರಳುತ್ತಿದ್ದು ಇತ್ತೀಚಿಗೆ ಗುಣವಾಗುತ್ತಿದ್ದರು. ತಾ. ೨೦ ಸಾಯಂಕಾಲ ಬಂಗಾಳದ ಹಿಂದೂ ಮುಸ್ಲಿಂ ದಂಗೆಯ ವಿಷಯದ ಮಾತಾಡುತ್ತಿದ್ದಂತೆ ಇವರನ್ನು ಎರಡು ಸಾರಿ ಡೆಟೆನ್ಯೂವಾಗಿ ಜೈಲಿನಲ್ಲಿಡಲಾಗಿತ್ತು. ಇವರು ಬಂಗಾಳ ತನ್ನ ಪತ್ರಿಕೆಗೆ ಆ ವಿಚಾರ ಒಂದು ಲೇಖನ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ನವನ್ನು ೧೦–೧೦ ಗಂಟೆಗೆ ಹೇಳುತ್ತಿದ್ದು ಪ್ರೆಸಿಡೆಂಟರಾಗಿದ್ದರು. ಅಖಿಲಭಾರತ ನಂತರ ಮಲಗಿದವರು. ಮಲಗಿ ಅರ್ಧ ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯ ಗಂಟೆಯಲ್ಲಿ ಎದೆ ನೋವಿನಿಂದ ಮೃತರಾ ಸದಸ್ಯರಾಗಿದ್ದರು. ೧೯೩೭ ರಿಂದ ಳಿದರು. ರವರೆಗೆ ಬಂಗಾಳ ಶಾಸನ ಸಭೆಯಲ್ಲಿ ವಿ ರೋಧ ಪಕ್ಷದ ಮುಂದಾಳಾಗಿದ್ದರು. ಕೇಂದ್ರ ಶಾಸನ ಸಭೆಗೆ ೧೯೪೬ರಲ್ಲಿ ಚುನಾಯಿತರಾದ ಇವರು ಕಾಂಗ್ರೆಸ್, ಪಕ್ಷೇತರ ಮುಂದಾಳಾಗಿ ಆರಿಸಲ್ಪಟ್ಟರು. ನಂತರ ರಚಿತವಾದ ತಾತ್ಕಾಲಿಕ ರಾಷ್ಟ್ರೀಯ ಸರಕಾರದಲ್ಲಿ ಮಂತ್ರಿಗಳಾದರು. ಆದರೆ ೧೯೪೬ ರಲ್ಲಿ ಇವರು ತಮ್ಮ ಭೇದದಿಂದ ಆ ಸರಕಾರಕ್ಕೆ ರಾಜಿನಾಮೆ ಕೊಟ್ಟ ಬಂಗಾಳದಲ್ಲಿ ತಮ್ಮದೇ ಆದ ಸಂಯುಕ್ತ ಸಮಾಜವಾದಿಗಳ ಸಂಸ್ಥೆಯನ್ನು ಸ್ಥಾಪಿಸಿದರು. ಈ ದಿವಸದವರೆಗೂ ಅವರು ಅದರ ಪ್ರೆಸಿಡೆಂಟರಾಗಿದ್ದರು. ಕಳೆದ ಯುದ್ಧದ ಸಮಯದಲ್ಲಿ ಅವರನ್ನು ರಾಜಬಂಧಿಯಾಗಿಡಲಾಗಿತ್ತು. ಆ ಸಮಯದಲ್ಲಿ ಅವರನ್ನು ಲಘು ಶಸ್ತ್ರಚಿಕಿತ್ಸೆಯಿಂದಿಗೆ ಪಡಿಸಲಾಯಿತಾದರೂ ೧೯೪೯ ರಲ್ಲಿ ಅವರನ್ನು ಮಡಿಕೇರಿಯಿಂದ ಕೂನೂರಿಗೆ ವರ್ಗಾಯಿಸಲಾಯಿತು. ಅನೇಕ ವರ್ಷಗಳ ಜೈಲು ಜೀವನದಿಂದ ಅವರ ದೇಹ ಪ್ರಕೃತಿಯು ಕೆಟ್ಟು ಹೋಗಿದ್ದರು ಇಂಥಾ ಅಕಾಲ ಮರಣಕ್ಕೆ ತುತ್ತಾಗಬೇಕಾಯಿತು.

ವಾರ್ತೆಗಳು.

"ಆಸ್ಸಾಮವು ಭಾರತದ ಗಡಿನಾಡಿನ ಸಂಸ್ಥಾನಗಳಲ್ಲಿ ಅತ್ಯಂತ ಆಯಕಟ್ಟಿನ ದಾಗಿದೆ. ಆದುದರಿಂದ ಅದರ ರಕ್ಷಣೆಯನ್ನು ಬಲಪಡಿಸುವುದು ಅತ್ಯವಶ್ಯವಿದೆ' ಎಂಬುದಾಗಿ ಅಸ್ಸಾಮಿನ ಗವರ್ನರ್ ಶ್ರೀ ಶ್ರೀಪ್ರಕಾಶರವರು ಬರೋಹಾ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು.

ಗ್ವಾಲಿಯರ್ ಮತ್ತು ಇಂಡೋರ್ ವಿಮಾನ ನಿಲ್ದಾಣಗಳ ಅಧಿಕಾರವನ್ನು ಬರುವ ಏಪ್ರಿಲ್ ತಾ. ೧ ರಿಂದ ಭಾರತ ಕೇಂದ್ರ ಸರಕಾರವು ತೆಗೆದುಕೊಳ್ಳುವುದು. ಈ ವರೆಗೆ ಈ ವಿಮಾನ ನಿಲ್ದಾಣಗಳು ಮಧ್ಯ ಭಾರತದ ಸರಕಾರದ ಆಡಳಿತ ಕ್ಕೊಳಪಟ್ಟಿದ್ದುವು.

ಕಳೆದ ೨೨ ವರ್ಷಗಳಿಂದ ಬೇಫ್ ಕವಿಪಸನರರ ಪ್ರಾಂತಾಧಿಕಾರ ಅನುಭವಿಸಿಕೊಂಡಿದ್ದ ೨೫ ಚದರ ಮೈಲು ವಿಸ್ತೀರ್ಣದ, ೫೦೦೦ ಜನಸಂಖ್ಯೆಯಿಂದೊಡಗೂಡಿದ ಪಂಥಪಿಪ್ಲೋಡಾ ಎಂಬ ಚಿಕ್ಕ ಸಂಸ್ಥಾನವು (ಗ್ವಾಲಿಯರ್, ಇಂಡೋರ್, ದೇವಾಸ್ ಮತ್ತು ಜಾವೋರಾಗಳಿಂದ ಆವರಿಸಲ್ಪಟ್ಟ ಚಿಕ್ಕ ದ್ವೀಪ) ಕಳೆದ ಜನವರಿ ತಾ. ೨೬ ರಂದು ಮಧ್ಯ ಭಾರತದೊಡನೆ ಸೇರಿತು.

ರೋಗಾಣುಗಳ ಯುದ್ಧ ಹೂಡಿ ಮಾನವಜಾತಿಯ ಮೇಲೆ ಘೋರ ವಿಪತ್ತನ್ನು ಹೂಡುವ ದುರಾಲೋಚನೆ ಕಟ್ಟಿಕೊಂಡ ಬಗ್ಗೆ ಜಪಾನಿನ ಚಕ್ರವರ್ತಿ ಹಿರೋಹಿಟೋ ಮತ್ತು ನಾಲ್ವರು ಇತರ ಮುಖಂಡರನ್ನು ಆಂತರಾಷ್ಟ್ರೀಯ ನ್ಯಾಯಸ್ಥಾನದ ಪ ಮುಂದೆ ವಿಚಾರಣೆಗೊಳಪಡಿಸಬೇಕೆಂಬ ಸೋವಿಯಟ್ ಸಲಹೆಗೆ ಚೀನದ ಕಮ್ಯೂನಿಸ್ಟ ಸರಕಾರ ಬೆಂಬಲ ಕೊಟ್ಟಿರುವುದು.

ಫೆಬ್ರವರಿ ತಾ. ೪ ಕ್ಕೆ ಅಂತ್ಯವಾಗ ವಾರದಲ್ಲಿ ಇಡೀ ಮದ್ರಾಸು ಪ್ರಾಂತ್ಯದಲ್ಲಿ ೧೪೪೫ ಮಂದಿಗೆ ಕಾಲೆರಾ ತಗಲಿ ೨೫೬೬ ಮಂದಿ ಮೃತಪಟ್ಟರು; ೯೬೬ ಮಂದಿಗೆ ಸಿಡುಬು ತಗಲಿ ೧೬೮ ಮರಣಗಳು ಸಂಭವಿಸಿದುವು.

ಕಮ್ಯೂನಿಸ್ಟ್ ಆಕ್ರಮಿತ ಶಾಂಘಾಯಿಯಲ್ಲಿರುವ ಅಮೇರಿಕದ ಸೊತ್ತುಗಳ ಮೇಲೆ ಉದ್ದೇಶಪೂರ್ವಕವಾದ ವಿಮೋಧಾಳಿ ನಡೆಸಿದ ಬಗ್ಗೆ ಸಂಯುಕ್ತ ಅಮೆರಿಕವು ಚೀನಾ ರಾಷ್ಟ್ರೀಯ ಸರಕಾರದ ಪಡೆ ನಿಷೇಧ ವ್ಯಕ್ತಪಡಿಸಿದೆ.

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಮಹಾಸಭೆ ಇತ್ತೀಚೆಗೆ ದೆಲ್ಲಿಯಲ್ಲಿ ಜರಗಿದಾಗ ಪ್ರಧಾನರಾದ ಜವಾಹರ್ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲರು ಪಾರ್ಟಿಯ ಲೀಡರು ಮತ್ತು ಡಿಪ್ಯೂಟಿ ಲೀಡರರಾಗಿ ಸರ್ವಾನುಮತದಿಂದ ತಿರಿಗಿ ಆರಿಸಿ ಬಂದರು.

ಐ. ಎನ್. ಎ ದಳಕ್ಕೆ ಸೇರಿ ನಿವೃತ್ತರಾದ ಇಲ್ಲವೆ ಡಿಸ್ಚಾರ್ಜ್ ಪಡೆದ ಸೇನಾಧಿಕಾರಿಗಳು ಹಿಂದೀಯ ಸೇನೆದಳಲ್ಲಿ ಕಮಿಷನ್ ಪದವಿಗೆ ಅರ್ಹರಿರುವರೆಂಬ ಆಜ್ಞೆ ಭಾರತ ಸರಕಾರದ ಮಂತ್ರಿಮಂಡಲದ ಕಡೆಯೊರಟಿದೆ.

ಪಣಜಿಯಲ್ಲಿ ಮಾರ್ಚ್ ತಾ. ೨೪ ರಿಂದ ೩೧ ರೆಗೆ ಜರಗುವ ವಿಜ್ಞಾನಿಗಳ ಸಮ್ಮೇಳನಕ್ಕೆ ಆಮಂತ್ರಣ ಕೊಡುವುದಾಗಿ ತಿಳಿದುಬಂದಿದೆ. ಇತ್ತೀಚೆಗೆ ನಡೆದ ಶಾಸ್ತ್ರಜ್ಞರ ಸಮಿತಿ ಕಿಸ್ತಾನ ವಿಜ್ಞಾನಿಗಳಿಗೆ ಆಮಂಕೊಟ್ಟಿದ್ದು, ಅವರು ಇಲ್ಲಿನ ಸಮಾವೇಶದಲ್ಲಿ ಭಾಗವಹಿಸಿದ್ದರು. ಇಂದೀಗ ತವೊಂದನ್ನು ಬಿಟ್ಟು ಉಳಿದ ಕಾಶ್ಮೀರ್ ವಿಜ್ಞಾನಿಗಳಿಗೆ ಆವರು ಆಮಂಕೊಟ್ಟಿರುವುದು.

ತದ ಒಕ್ಕೂಲತನದ ಉತ್ಪಾದನೆಯುತ್ತಿನಲ್ಲಿಯೇ ಆತೀ ಕಡಿಮೆ ತರಗತಿಗಾಗಿದ್ದು ಈ ಕಾರಣದಿಂದ ಭಾರತವಿಹಾರದ ಬಿಕ್ಕಟ್ಟನ್ನು ಎದುರಿಸು ಆಹಾರಕ್ಕಾಗಿ ವಿಶೇಷಗಳ ಮೇಲೆ ಲಂಬಿಸಿಕೊಂಡು ಎಂದಿನವರೆಗೆ ಭಾರತ ವಿಫೋ ಅಂದಿನವರೆಗೆ ಅದರ ಸ್ವತಂತ್ರಕ್ಕೆ ಅರ್ಥವಿಲ್ಲ. ಎಂದು ಭಾರತದ ಆಹಾ ಉತ್ಪಾದನಾ ಕಮಿಶನರಾದ ಸರ್ ಕೆ. ಪಾಟೇಲರು ಹೇಳಿದರು. ಸ್ಟಿಟನಿನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಕನ್ಸರ್ವೇಟಿವ್ ಮುಂದಾಳುವಾದ ಚರ್ಚಿಲ್ಲರವರು ಭಾಗವಹಿಸಿ ವಿಜಯವನ್ನು ಸಂಪಾದಿಸಲು ಶ್ರೀ ಹಗಲಿಸ್ಫದೆ ಶ್ರಮಪಡುತ್ತಿದ್ದಾರೆ. ಚರ್ಚಿಲ್ಲರು ಚುನಾವಣೆ ಪ್ರಸಾರದ ಭಾಷಣ ಮಾಡುತ್ತಾ, ಈ ಚುನಾವಣೆಯಲ್ಲಿ ತನ್ನ ಪಕ್ಷವು ಜಯಘನ್ನು ಪಡೆದ ಅಧಿಕಾರಕ್ಕೆ ಬಂದಿ ವೇಲೆ, ರಷ್ಯಾ ಆಧಿಪತ್ಯದ ಮಾರ್ಷಲ್ ಸ್ಟಾಲಿನ್ ನಾಡನೆ ತಾನೇ ಸ್ವತಹ ಮಾತನಾಡಿ ಜಗತ್ತಿಗೆ ವಿನಾಶಕಾರಿಯಾದ ಯುದ್ಧದ ಭೀತಿಯನ್ನು ನಿವಾರಿಸಲು ಪ್ರಯತ್ನಪಡುವೆನು—ಎಂಬುದಾಗಿ ತಿಳಿಸಿದರು.

ನೇಪಾಳದ ಮಂತ್ರಿಮಂಡಲದ ಮಹಾ ಸೇನಾಪತಿಗಳೂ ಆದ ಲೆಫ್ಟಿನೆಂಟ್ ಜನರಲ್ ಮಹಾರಾಜ ಮೋಹನ ಶಮ್ಸೇರ್ ಜಂಗ ಬಹದ್ದೂರರು ಡೆಲ್ಲಿಗೆ ಬಂದಾಗ ಇದೇ ೨೦ನೇ ದಿನಾಂಕ ಅವರಿಗೆ ಗೌರವಾರ್ಥ ಐರ್ವಿನ್ ಕ್ರೀಡಾಂಗಣದಲ್ಲಿ ಸೈನಿಕ ಕವಾಯತನ್ನು ಏರ್ಪಡಿಸಲಾಗಿತ್ತು. ಆ ಪ್ರಸಂಗದಲ್ಲಿ ಭಾರತದ ಪರವಾಗಿ ರಂಕ್ಷಣಾ ಮಂತ್ರಿ ಸರದಾರ ಬಲದೇವ ಸಿಂಘರು ಸಜ್ಜು ಕೆತ್ತಿರುವ ಖಡ್ಗವನ್ನು ಅವರಿಗೆ ಕಾಣಿಕೆಯಾಗಿ ಅರ್ಪಿಸಿದರು.

ಸಾಗರದ ಮುಸ್ಲೀಮ್ ಕಸಾಯಿಗಳು ಇನ್ನು ಮುಂದೆ ಗೋವಧೆ ಮಾಡುವುದಿಲ್ಲವೆಂದೂ ಗೋಮಾಂಸ ವಿಕ್ರಯಿಸುವುದಿಲ್ಲವೆಂದೂ ಸ್ವತ್ಯ ಪಿಧಾರ ಕೈಕೊಂಡಿರುವರು. ಒಂದು ವಾರದ ಹಿಂದೆ ಗೋಹತ್ಯೆ ನಡೆಸಿದ ಬಗ್ಗೆ ದಂಗೆ ಎದ್ದು ಇಬ್ಬರು ಆ ದಂಗೆಗೆ ಬಲಿಯಾದ ನಂತರ ಈ ನಿರ್ಧಾರವನ್ನು ಅವರು ಕೈಕೊಂಡು ದಾಗಿದೆ.

ಹಿಂದೂ ಧರ್ಮ ಮಸೂದೆ ಮತ್ತು ಗೋವಧೆ ಇವೆರಡೂ ನಿಲ್ಲಿಸಲ್ಪಡುವತನಕ ತಾವು ಶಾಂತಿಯುಕ್ತ ಸತ್ಯಾಗ್ರಹವನ್ನು ನಿರ್ವಹಿಸಲು ನಿರ್ಧರಿಸುವುದಾಗಿಯೂ ಇದಕ್ಕೆ ಯಾವ ಆಧ್ಯಾತ್ಮಿಕಾಕಂಕ್ಷೆಗಳು ಬಂದರೂ ತಾವು ಹಿಂಜರಿಯುವುದಿಲ್ಲವಾಗಿಯೂ ಸ್ವಾಮಿ ಕರ್ಪಾತ್ರಿಯೆಂಬ ಸನಾತನಿಗಳು ತಮ್ಮ ಹಿಂಬಾಲಕರ ಪರವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಪಾಕೀಸ್ತಾನವು ತನ್ನ ರೂಪಾಯಿ ಮೌಲ್ಯ ಇಳಿಸದಿದ್ದರೆ ಪ್ರಪಂಚ ಬ್ಯಾಂಕು ಸಹಾಯ ನೀಡುವ ಸಂಭವ ಕಡಿಮೆ ಎಂದು ಡೆಲ್ಲಿ ಅಧಿಕಾರಿ ವೃತ್ತಗಳಲ್ಲಿ ವಾರ್ತೆ ಇದೆ.

ಕಾಂಗ್ರೆಸ್ಸಿನಲ್ಲಿ ಪ್ರಾಥಮಿಕ ಸದಸ್ಯರ ಸಂಖ್ಯೆ ೨,೯೮,೧೯,೨೬೯ ಅಧಿಕೃತ ಸದಸ್ಯರು ೧೪,೩೯,೬೪೮ ಸಕ್ರಿಯಾತ್ಮಕ ಸದಸ್ಯರು ೯,೬೬,೮೪೪ ಎಂದು ಕಮಿಲಭಾರತ ಕಾಂಗ್ರೆಸ್ ಸಭೆಯಲ್ಲಿ ಕಾಂಗ್ರೆಸ್ ಕಾರ್ಯದರ್ಶಿ ಕಾಳೇಶ್ವರರಾಯರು ತಿಳಿಸಿದ್ದಾರೆ.

ಶ್ರೀ ರಾಮಕೃಷ್ಣ ಧರ್ಮದ ಔಷಧಾಲಯ.

ಭಗವಂತನ ಕೃಪೆಯಿಂದ ಮತ್ತು ಕೊಡಗಿನ ಮತ್ತು ಪರ ಪ್ರಾಂತ್ಯಗಳ ಉದಾರಿಗಳ ಸಹಾಯದಿಂದ ಈ ಔಷಧಾಲಯವು ಈಗ ಮೂರು ವರ್ಷಗಳಿಂದ ನಾಡಿನ ಜನರ ಸೇವೆ ಸಲ್ಲಿಸುತ್ತಿದೆ. ಈ ವರ್ಷ 24,822 ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ಮಾಡಲಾಯಿತು. ದಿನ ದಿನಕ್ಕೆ ಔಷಧಾಲಯವು ಹೆಚ್ಚು ಜನಾದರಣೀಯವಾಗುತ್ತಿದೆ. ಎಂದು ತಿಳಿಸಲು ಸಂತೋಷಿಸುತ್ತೇವೆ ಡಾ. ಎ. ಡಿ. ಬಾಲಸುಬ್ರಹ್ಮಣ್ಯ ಮೊದಲಿಯೂರ್, ಎಲ್. ಎಂ. ಪಿ. ಆವರು ಶ್ರದ್ಧೆ ವಹಿಸಿ ರೋಗಿಗಳಿಗೆ ಅಗತ್ಯವಾದ ಚಿಕಿತ್ಸೆ ಮಾಡುತ್ತಿದ್ದಾರೆ. ಈ ವರ್ಷ ಸಾರ್ವಜನಿಕರ ಔದಾರ್ಯದಿಂದ ರೂ. 8421-11-0 ದೊರಕಿ ರೂ. 9215-1-6 ವೆಚ್ಚವಾಯಿತ.

ಈಗ ಸರ್ಕಾರದವರು ಔಷಧಾಲಯ ಉಪಯೋಗಕ್ಕಾಗಿ ಅಶ್ರಮದ ಮುಂದಿನ ಪೈಸಾರಿ ಸ್ಥಳವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಇನ್ನೂ ಮೂರು ಎಕ್ರೆ ಜಾಗ ಅವಶ್ಯಕವಾಗಿದೆ. ಆ ಸ್ಥಳದಲ್ಲಿ ರೋಗಿಗಳು ತಂಗುವುದಕ್ಕೆ ಮತ್ತು ಡಾಕ್ಟರ್ ಅವರ ವಾಸಕ್ಕೆ ಗೃಹಗಳನ್ನು ಕಟ್ಟಿಸುವ ಯೋಜನೆಯಿದೆ. ಈ ವರ್ಷ ಕೆಳಗೆ ಕಾಣಿಸಿರುವ ಬಾಬುಗಳಿಗಾಗಿ ಹಣ ಸಂಗ್ರಹಿಸುತ್ತಿರಬೇಕಾಗಿದೆ

1. ವಸತಿ ಗೃಹಗಳ ನಿರ್ಮಾಣಕ್ಕಾಗಿ ರೂ. 30,000
2. ಇತರ ಸೌಕರ್ಯಗಳನ್ನು ಕಲ್ಪಿಸಲು 3 000
3. ಈ ಸಾಲಿನ ದೈನಂದಿನ ವೆಚ್ಚಕ್ಕಾಗಿ 10,000

ಸಾರ್ವಜನಿಕ ಮಹನೀಯರಿಂದಲೇ ಈ ಧನ ಸಂಗ್ರಹವಾಗಿ ನಾಡಿನ ದೀನಜನರಿಗೆ ನೆರವು ದೊರಕಿಸಬೇಕಾಗಿದೆ. ಆದ್ದರಿಂದ ಈ ಸ್ವಾಸ್ಥ್ಯಕಾರ್ಯಕ್ಕೆ ತಮ್ಮ ಶಕ್ತಿಯಿಂದ ಸಹಾಯಮಾಡಬೇಕಾಗಿ ಪ್ರಾರ್ಥನೆ.

ಅಭ್ಯೀಯರ ಸವಿನೆನಪನ್ನು ಚಿರಸ್ಥಾಯಿಯಾಗಿ ಮಾಡಬಯಸುವವರು ಒಂದು ಸಾವಿರ ರೂಪಾಯಿ ನಷ್ಟು ಸಹಾಯಮಾಡಿದರೆ ಆವರಿಂದ ಸ್ವೀಕರಿಸಿ, ಆವರ ಹೆಸರುಗಳನ್ನು ಔಷಧಾಲಯದಲ್ಲಿ ಕೆತ್ತಿಸಲು ಏರ್ಪಡಿಸಲಾಗುತ್ತಿದೆ. ಎಂದಿನಂತೆ ಈ ವರ್ಷವೂ ಉತ್ಸವವನ್ನು ನಡೆಸಲು ಏರ್ಪಡಿಸಿದೆ. ಆ ಸಂದರ್ಭದಲ್ಲಿ ಸಾರ್ವಜನಿಕರು ಕೊಡುವ ಸಹಾಯವನ್ನು ಆದರದಿಂದ ಸ್ವೀಕರಿಸಲಾಗುತ್ತದೆ.

ಸ್ವಾಮಿ ವಿಶ್ವಂಭರಾನಂದ
ಆಧ್ಯಕ್ಷರು.

Coorg Forest Department
Mercara the 20th February, 50

Timber Sale Notice.

About 1 00 000 cft of Teak, Rosewood, Honne (Vengai), Nandi (Venteak), Mathi (Karimaradu) and other jungle wood species lying at the Coorg Timber Depot, Hunsur, will be sold by public auction at the said Depot on Saturday the 4th March, 1950, commencing at 10-30 A. M. Timber will be sold in small lots to suit the convenience of private consumers. For further particulars apply to the Chief Forest Officer, Coorg, Mercara.

C M. Kushalappa,
Chief Forest Officer, Coorg.

ದಿ ಕೂರ್ಗ್ ಜನರಲ್ ಇಂಪ್ಲೀಮೆಂಟ್ಸ್ ಲಿಮಿಟೆಡ್,
ಫೇಜರ್ ಪೇಟೆ.
ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಹಣ್ಣಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಪಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾಗಿ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಕೊಂಡ್ಯಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0-12-0 ರಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫೇಜರ್‌ಪೇಟೆ,
ತಾ. 30-9-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಗಾಂಧೀಜಿಗೆ ದ್ರೋಹ.

ಲೇ:–ಶ್ರೀ ಕೆ. ಜಿ. ಮಶ್ರೂವಾಲಾ

ಈಗೀಗ ಪ್ರತಿಯೊಬ್ಬರ ಮೇಲೆ, "ಗಾಂಧೀಜಿಗೆ ದ್ರೋಹ' ಬಗೆದ ಆರೋಪ ಹೊರಿಸುವುದನ್ನು ಕೇಳುತ್ತೇವೆ. ಈ ಪಾಪ ಇಷ್ಟೊಂದು ಪ್ರಚಾರವಾಗಿರುವುದೇ ನಿಜವಾಗಿದ್ದರೆ ಅಂಥ ಪಾಪಿಗಳ ಕಡೆ ಬೊಟ್ಟು ತೋರಿಸುವ ಅವಶ್ಯಕತೆಯೇ ಇಲ್ಲ. ರೋಗಿಗಳ ಊರಲ್ಲಿ ರೋಗಿಗಳನ್ನು ಎಣಿಸುವುದಕ್ಕಿಂತ ಆರೋಗ್ಯವಂತರನ್ನು ಎಣಿಸುವುದೇ ಹೆಚ್ಚು ಸುಲಭ. ಆದೇ ನ್ಯಾಯದಿಂದ, ದ್ರೋಹಿಗಳನ್ನು ಹುಡುಕಿ ತೆಗೆಯುವುದಕ್ಕಿಂತ ಗಾಂಧೀಜಿಗೆ ನಿಷ್ಠರಾಗಿ ನಡೆಯುತ್ತಿರುವವರನ್ನು ಅರಸುತ್ತ ಹೋಗುವುದು ಹೆಚ್ಚು ಹಿತಕರವಾದೀತು. ನಿಜವಾಗಿಯೂ ಸೂರಾರು ದ್ರೋಹಿಗಳ ನಡುವೆ ಗಾಂಧೀಜಿ ತೋರಿಸಿದ ದಾರಿಯಲ್ಲಿ ವಿನಯದಿಂದಲೂ ಭಕ್ತಿಯಿಂದಲೂ ನಡೆಯುತ್ತ, ಹೀಗೆ ನೂಡುತ್ತಿರುವ ತಾವು ಏಕಾಕಿಗಳಾಗಿರುವೆವೋ ತಮ್ಮೊಡನೆ ಬೇರೆ ಜನರೂ ಇರುವರೋ ಎಂಬ ಚಿಂತೆಯನ್ನು ಕೂಡ ಹೆಚ್ಚಿಕೊಳ್ಳದ ಕೆಲವರಾದರೂ ನಿಜಾನುಯಾಯಿಗಳು ಇದ್ದೇ ಇರಬೇಕು. ನಿಷ್ಠಾವಂತ ಗಸ್ತಿನ ಪೊಲೀಸನು ಇಡಿ ಜಗತ್ತೇ ನಿದ್ರಿಸುತ್ತಿರುವಾಗ ತಾನೊಬ್ಬನೇ ಏಕೆ ಎಚ್ಚರಿರಬೇಕೆಂದು ಚಿಂತಿಸುವನೆ? ಆಡವಿಯ ಹೂ ತನ್ನ ಸುಗಂಧವನ್ನು ಸವಿದು ಮೆಚ್ಚಲು ಯಾವ ದಾರಿಗನೂ ಇಲ್ಲದಿರುವಾಗ ತಾನೇಕೆ ಅರಳಿ ಗಾಳಿಯಲ್ಲಿ ವ್ಯರ್ಥವಾಗಿ ಕಂಪು ಹೆಚ್ಚಿಸಬೇಕೆಂದು ಬಗೆಯುವುದೆ? ಜಗತ್ತು ನಿಶ್ಚಿಂತೆಯಿಂದ ನಿದ್ರಿಸಲೆಂದೇ ತಾನು ಎಚ್ಚರಿರುವುದಾಗಿ ಗಸ್ತಿಯವನು ಭಾವಿಸುತ್ತಾನೆ. ಅವರು ನಿದ್ರಿಸಲು ಅಸಮರ್ಥರಾದರೆ ತನ್ನ ಗಸ್ತೇ ನಿಷ್ಫಲವಾಗುವುದು. ಇಂತೆಯೇ ಹೂವಿಗೂ ವಿಚಾರಶಕ್ತಿಯಿದ್ದಿದ್ದರೆ, ಅದು ಸುಗಂಧ ಬೀರುವುದೇ ತನ್ನ ಪುಣ್ಯ, ಅದನ್ನು ಯಾರಾದರೂ ಅನುಭವಿಸಿ ಮೆಚ್ಚಲಿ ಬಿಡಲಿ ತಾನೇಕೆ ತನ್ನ ಪುಣ್ಯ ಕಾರ್ಯವನ್ನು ತೊರೆಯಲಿ? ಎಂದು ಬಗೆಯಬಹುದು. ಈ ಭಾವದಿಂದಲೇ ನಿಷ್ಠಾವಂತರು ಗಾಂಧೀಜಿಯ ಮಾರ್ಗದಲ್ಲಿ ನಡೆಯುತ್ತಿರಬಹುದು. ಯಾರಿಗಾದರೂ ಇಂಥ ಒಬ್ಬರಾದರೂ ಸಿಕ್ಕಿದರೂ ಸಾಕು. ಸಾವಿರಾರು ಕೃತ್ರಿಮಾಭಿಮಾನಿಗಳನ್ನೂ ಮೀರಿತು ಆ ಒಬ್ಬಿರನ್ನು ತೋರಿಸಿಕೊಡುವುದೇ ದೊಡ್ಡ ಸೌಭಾಗ್ಯವೆಂದು ಬಗೆಯುತಕ್ಕದ್ದು ಮತ್ತು ಅಂಥ ಸತ್ಯಸಂಧರನ್ನು ಮನಸಾ ಆದರಿಸತಕ್ಕದ್ದು. ಶೋಧಕರು ಈ ದೃಷ್ಟಿಯಿಂದ ಕಾರ್ಯ ಪ್ರವೃತ್ತರಾದರೆ ಅವರಿಗೆ ಕೆಲ ಆಶ್ಚರ್ಯಕರ ಅನುಭವಗಳೊದಗುವ ಸಂಭವವುಂಟು. ಒಮ್ಮೊಮ್ಮೆ ಅವರಿಗೆ ಹುಡುಕ್ಕಿಂತ ಹೆಚ್ಚು ಸತ್ಯಸಂಧರು ದೊರಕಿದರೂ ದೊರಕಬಹುದು. ಅದರ ಶೋಧನಾ ದೃಷ್ಟಿಯಲ್ಲಿಯೂ ಆಕಸ್ಮಿಕವಾಗಿ ಬದಲಾವಣೆಯೂಗಲೂಬಹುದು. ಗಾಂಧೀ ಸಿದ್ಧಾಂತಗಳನ್ನು ಸರಿಯಾಗಿ ಅನುಸರಿಸದವರಲ್ಲಿರುವ ದೋಷಗಳನ್ನೇ ಹುಡುಕಿ ತೆಗೆಯುವ ಪ್ರವೃತ್ತಿ ಹಿಂಗಿ, ಈ ಮನುಷ್ಯ ನೂರಕ್ಕೆ ನೂರರಷ್ಟು ಗಾಂಧಿ ಮೂರ್ತಿಯಾಗಿಲ್ಲದಿದ್ದರೂ ನೂರಕ್ಕೆ ತೊಂಭತ್ತು ಪಾಲು ಗಾಂಧೀ ಮೂರ್ತಿಯಾಗಿದ್ದಾನೆ. ಈತ ನೂರಕ್ಕೆ ೬೦ ಗಾಂಧೀಮೂರ್ತಿ, ಇದು ನೂರಕ್ಕೆ ೫೦ ಗಾಂಧೀ ಮೂರ್ತಿಯೆಂದು ಕಾಣುವ ಬುದ್ಧಿ ಹುಟ್ಟೀತು. ಆಗ ಅವನು ಅನೇಕರನ್ನು 'ಪಾಸು' ಮಾಡಬಹುದು, ಅಲ್ಲದೆ, ಜನರ ದೌರ್ಬಲ್ಯಗಳಿಗಾಗಿ ಅವರನ್ನು ತಿರಸ್ಕರಿಸುವ ಬದಲು ಅವರ ಪ್ರಯತ್ನ ಶೀಲತೆಗಾಗಿ ಸಂತೋಷಪಟ್ಟು ಅವರ ದೌರ್ಬಲ್ಯವನ್ನು ಸಮದೃಷ್ಟಿಯಿಂದ ನೋಡುವ ಪ್ರವೃತ್ತಿಯುಂಟಾಗಬಹುದು.

ಶುದ್ಧ ವಿವೇಕ ದೃಷ್ಟಿಯಿಂದ ನೋಡಿದರೆ ಅಶ್ರದ್ಧೋಷ ಮತ್ತು ಅಶುತೋಷ– ಎಂದರೆ ಬೇಗನೆ ಅಸಂತುಷ್ಟರಾಗುವ ಮತ್ತು ಬೇಗನೆ ಸಂತುಷ್ಟರಾಗುವ ಪ್ರವೃತ್ತಿಗಳೆರಡೂ ತಪ್ಪೇ ಸರಿ. ಅವರೂ ಅಶ್ರದ್ಧೋಷಕ್ಕಿಂತ ಅಶುತೋಷ ಸ್ವಭಾವವೇ ಲೇಸೆನ್ನಬಹುದು. ಏಕೆಂದರೆ ಅಶ್ರದ್ಧತೋಷ ಸ್ವಭಾವಿ ತನ್ನ ಸುತ್ತಮುತ್ತಣ ಜಗತ್ತಿನ ಹೊಲಸುಗಳನ್ನೆಲ್ಲ ತನ್ನತ್ತ ಸೆಳೆಯುವ ಬದಲು ಒಳತನ್ನೇ ಆಕರ್ಷಿಸುತ್ತಿರುತ್ತಾನೆ. ಗೊಬ್ಬರದ ರಾಶಿಯನ್ನು ಕೆದುರುವ ಕೋಳಿ ಅದರಲ್ಲಿರುವ ಹುಳಹುಪ್ಪಡಿಗಳನ್ನು ಆರಿಸಿ ಹೊಟ್ಟೆ ಹೊರೆದುಕೊಳ್ಳುತ್ತದೆ. ಆದರೆ ಮದವೇರಿದ ಗೂಳಿ ಗೊಬ್ಬರವನ್ನು ಸಿಕ್ಕಾಪಟ್ಟೆ ಕೆದರಿ ಜಿಲ್ಲಿ ತನ್ನ ತಲೆ ಕೋಡು, ಕಾಲುಗಳನ್ನೆಲ್ಲ ಹೊಲಸು ಮಾಡಿಕೊಳ್ಳುತ್ತದೆ ಹೊಲಸನ್ನು ತೊಳೆಯುವವನು ಅದರಲ್ಲಿ ಬೆಲೆ ಬಾಳುವ ಒಡವೆಗಳನ್ನು ಕಂಡುಹಿಡಿಯುತ್ತಾನೆ. ಆದರೆ ಅದನ್ನು ಹೊತ್ತುಹಾಕುವವನು ಎಷ್ಟು ಮಣ ಹೊಲಸನ್ನು ನದಿಗೊಯ್ದು ಒಗೆಯಲಾಯಿತೆಂಬ ಲೆಕ್ಕವನ್ನೇ ನೋಡುತ್ತಾನೆ.

ಈ ವಿಷಯದಲ್ಲಿ ನನಗೆ ಸಂಬಂಧಪಟ್ಟಷ್ಟನ್ನೇ ಹೇಳಬೇಕಾದರೆ, ಎಷ್ಟೋ ಬಾರಿ ಕೆಲವರ ದೃಷ್ಟಿಯಲ್ಲಿ ಅಪ್ಪೀಪಾರ್ಹವೂ ಗಾಂಧೀದ್ರೋಹಾತ್ಮಕವೂ ಎನಿಸಿರಬಹುದಾದ ರೀತಿಯಲ್ಲಿ ನಾನು ನಡೆದುಕೊಂಡದ್ದುಂಟು. ನಡೆದದ್ದುಂಟೆಂದು ಒಪ್ಪಲು ಸಿದ್ಧನಾಗಿದ್ದೇನೆ. ಗಾಂಧೀಜಿ ಬದುಕಿದ್ದಾಗಲೂ ಅವರ ಪೂರ್ಣ ಅನುಯಾಯಿಯೆನಿಸುವ ಸೌಭಾಗ್ಯ ನನಗೆ ದೊರೆತಿರಲಿಲ್ಲ. ಅನೇಕ ವಿಷಯಗಳಲ್ಲಿ ನನಗೆ ಅವರ ವಿಚಾರಗಳು ತಡವಿಲ್ಲದೆ ಒಪ್ಪಿಗೆಯಾಗುತ್ತಿದ್ದವು; ಅವುಗಳನ್ನು ಕಾರ್ಯಕಾರಿಯಾಗಿ ಮಾಡುವಲ್ಲಿ ನಾನು ಯಥಾಶಕ್ತಿ ಹೆಣಗುತ್ತಲೂ ಇದ್ದೆ. ಆದರೆ ಕೆಲವು ವಿಷಯಗಳಲ್ಲಿ ನಾನು ಅವರನ್ನು ವಿರೋಧಿಸಿದ್ದ ಅಥವಾ ಬಹಳ ತಡಮಾಡಿ ಒಪ್ಪಿದ್ದು ಮತ್ತು ಅವರಿಗೆ ತಟಸ್ಥನಾಗಿದ್ದದ್ದೂ ಉಂಟು. ಇನ್ನು ಕೆಲ ವಿಷಯಗಳಲ್ಲಿ ಕೊನೆಯ ವರೆಗೂ ನಾನು 'ಅಜಾತಪ್ರತ್ಯಯ' ಅಂದರೆ ಮನವರಿಕೆಯಾಗದೆ ಅಸಹಮತವಾಗಿಯೇ ಉಳಿದಿದೆ. ಸ್ವತಃ ಗಾಂಧೀಜಿಗೆ ನನ್ನ ಈ ಸ್ಥಿತಿ ಚೆನ್ನಾಗಿ ಗೊತ್ತಿದ್ದೂ ಅವರು ನನ್ನನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿದ್ದರು. ಈ ಕಾರಣದಿಂದಲೇ ನಾನು 'ಹರಿಜನ' ಪತ್ರಿಕೆಗಳ ಹೊಣೆಯನ್ನು ವಹಿಸಿದಾಗ, ಎಷ್ಟೋ ವಿಚಾರಗಳನ್ನು ನಾನು ಗಾಂಧೀಜಿಯಿಂದ ಪಡೆದಿದ್ದೇನೆ; ಮತ್ತೆ ಕೆಲವನ್ನು ಅನ್ಯರಿಂದ ಪಡೆದಿದ್ದೇನೆ, ಬೇರೆ ಕೆಲವು ಸ್ವತಃ ನನ್ನಲ್ಲೇ ಉದ್ಭವಿಸಿದ್ದೂ ಇದೆಯೆಂಬಾಶಯದ ಮಾತುಗಳನ್ನು ನಾನು ಬರೆದುಕೊಂಡಿದ್ದೆ. ಈ ಎಲ್ಲ ವಿಚಾರಗಳೂ ನನ್ನ ಜೀವನದಲ್ಲಿ ಎರಕಗೊಂಡುಬಿಟ್ಟಿವೆ. ಆದುದರಿಂದ ನಾನು ಯಾವುದಾದರೊಂದು ವಿಷಯವನ್ನು ಮಂಡಿಸುವಾಗ ಅದರ ಸಮರ್ಥನೆಗಾಗಿ ಪ್ರತಿಯೊಂದು ಸಂದರ್ಭದಲ್ಲಿಯೂ ಗಾಂಧೀಜಿಯ ಮಾತನ್ನೇ ಪ್ರಮಾಣತ್ವೇನ ಉದಾಹರಿಸಲು ಸಮರ್ಥನಾಗಲಿಕ್ಕಿಲ್ಲ. ಅವನ್ನು ಗಾಂಧೀ ವಚನದ ಒರೆಗಲ್ಲಮೇಲಲ್ಲ, ಸತ್ಯ ಮತ್ತು ಅಹಿಂಸೆಗಳ ಒರೆಗಲ್ಲ ಮೇಲೆಯೆ ಒರೆದು ನೋಡತಕ್ಕದ್ದು.

ಅರ್ಧಶತಕದಷ್ಟು ಕಾಲದ ಸಾರ್ವಜನಿಕ ಸೇವೆಯಲ್ಲಿ ಗಾಂಧೀಜಿಯ ಜೀವನ ವಿಕಾಸಗೊಂಡಿತ್ತು. ಚಿಲ್ಲರೆ ಅಂಶಗಳಲ್ಲಿ ಅವರ ಅಭಿಪ್ರಾಯಗಳು ಮೇಲಿಂದ ಮೇಲೆ ಬದಲಾದವು. ವಿಕಾಸಪರವಾದ ಜೀವನದಲ್ಲಿ ಇಂಥ ಅಭಿಪ್ರಾಯ ಪರಿವರ್ತನ ಅನಿವಾರ್ಯವಾಗಿದೆ. ಆದುದರಿಂದ ವಿವರಗಳ ಮೇಲೆ ಅವರ ವಚನಗಳನ್ನು ಪ್ರಮಾಣವೆಂದು ಪರಿಗ್ರಹಿಸಲು ಸಾಧ್ಯವಿಲ್ಲ. ಆಚಾರ ವಿಚಾರಗಳ ಮೂಲ ತಳಹದಿಯೇ ಮುಖ್ಯ ಆರ್ಥಾತ್ ಸತ್ಯ, ಅಹಿಂಸೆ, ಸರ್ವ ಕ್ಷೇತ್ರಗಳಲ್ಲಿಯೂ ಸಂಯಮ ಮತ್ತು ನೈತಿಕ ಮತ್ತು ಆರ್ಥಿಕ ಹಿತಗಳಲ್ಲಿ ಸಂಘರ್ಷ ತೋರಿ ಬಂದಲ್ಲಿ ನೈತಿಕಹಿತವನ್ನೇ ಸ್ವೀಕರಿಸುವುದು, ಇವೀಗ ಮೂಲಭೂತ ವಿಷಯಗಳು,

ಈಗಿನ ಫ್ಯಾಷನ್.

ಗಾಂಧೀಜಿಗೆ ದ್ರೋಹಬಗೆಯುವ ಆರೋಪವನ್ನು ಹೊರಿಸುವುದೀಗ ಒಂದು ಫ್ಯಾಷನ್ನೇ ಆಗಿಬಿಟ್ಟಿದೆ. ಅದಕ್ಕೊಂದು ಕಾರಣವೂ ಇದೆ. ನಮ್ಮ ಅನೇಕ ಬಂಧುಗಳು 'ಗಾಂಧಿ,' 'ಸರ್ವೋದಯ,' 'ಸತ್ಯ ಮತ್ತು ಅಹಿಂಸೆ' ಮೊದಲಾದ ಶಬ್ದಗಳನ್ನು ಸಿಕ್ಕಾಬಟ್ಟೆ ಉಪಯೋಗಿಸುವ ಒಂದು ಚಾಳಿಯನ್ನೇ ಕಲಿತುಕೊಂಡಿದ್ದಾರೆ. ಆ ಶಬ್ದಗಳಿಗೆ ಏನೂ ಅರ್ಥವೇ ಇಲ್ಲ, ಅವು ಬರಿ 'ಪ್ರಾದಪೂರಕ' ಶಬ್ದಗಳೆಂಬಂತಾಗಿದೆ. ತನ್ನ ಪ್ರತಿಯೊಂದು ಭಾಷಣದಲ್ಲೆಯೂ 'ಇದೇ ನಮ್ಮ ಪಿತನ ಉಪದೇಶ' ಅಥವಾ 'ಕಟ್ಟ ಕಡೆಗೆ ಜಗತ್ತಿನ ಹಿತ ಗಾಂಧೀಜಿ ಹೇಳಿದ ಮಾರ್ಗವನ್ನು ಸರಿಸುವುದರಿಂದಲೇ ಆಗಬಲ್ಲದು' ಎಂದು ಹೇಳದಿದ್ದರೆ ತನ್ನ ಭಾಷಣದ ತಳಕಟ್ಟೇ ಬಲಗೊಳ್ಳದು. ಅದರಿಂದ ಜನರಿಗೆ ಮನವರಿಕೆಯಾಗದು ಎಂದು ಪ್ರತಿಯೊಬ್ಬ ವಿದ್ಯಾರ್ಥಿಯೂ, ಮಂತ್ರಿಯೂ ಭಾವಿಸಿದಂತಿದೆ.

ಅಡಿಗಡಿಗೆ ರಾಷ್ಟ್ರಪಿತನ ಹೆಸರಿನ ಆಧಾರವನ್ನು ಉಪಯೋಗಿಸುವುದರ ಬದಲು ನಾವು ನಮ್ಮ ಹೃದಯದಲ್ಲಿನ ಪ್ರೇಮರೂಪ ಪರಮಾತ್ಮನ ಆಧಾರವನ್ನೇ ಉಪಯೋಗಿಸಿಕೊಂಡರೆ ಎಷ್ಟೋ ಒಳ್ಳೆಯದಾಗುತ್ತಿತ್ತು. ಏಕೆಂದರೆ ಗಾಂಧೀಜಿ ಏನೇ ಹೇಳಲಿ ಮಾಡಲಿ, ಅದೆಲ್ಲವೂ ಅವರ ಹೃದಯಸ್ಥವಾದ ಸತ್ಯನ್ವೇಷಣಪ್ರವೃತ್ತಿ ಮತ್ತು ಅಹಿಂಸೆಯಿಂದಲೇ ಉದ್ಭವಿತವಾಗುತ್ತಿತ್ತು. ಆ ಪರಮಾತ್ಮರು ನಮ್ಮ ಮಧ್ಯದಲ್ಲಿ ಇಂದು ಉಳಿದಿಲ್ಲವಾದರೂ ಅವರಿಗೆ ದಾರಿ ತೋರಿದ ಆ ಜ್ಯೋತಿ ಇಂದಿಗೂ ಇದ್ದೇ ಇದೆ, ಮತ್ತು ನಾವು ಅದರ ಬೆಳಕಿನಲ್ಲಿ ನಡೆಯಲಿಚ್ಛಿಸಿದರೆ ಅದು ಇಂದಿಗೂ ನಮಗೆ ದಾರಿ ತೋರಿಯೇತೀರುವುದು.

'ಹರಿಜನ'

THE WARDEN INSURANCE CO., Ltd.
Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director; – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**
THE LONDON GUARANTEE & ACCIDENT CO., Ltd.
(Incorporated in England)
Assets Exceed Rs. 10,00,00,000
a Subsidiary Company of
THE PHOENIX ASSURANCE CO., Ltd.
(One of the Largest Assurance Companies in the World)
Assets Exceed Rs. 45,00,00,000
Transact **FIRE INSURANCE**
Enquiries for representation solicited.
Apply to;

Chief Agency Office *Virajpet (Coorg)* *or* **A. S. Aiyappa,** *Branch Secretary, Gandhinagar, BANGALORE CITY*

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಖಜೇರಿ:— ಪೂನ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಏಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.

ಅಥವಾ

ಯಂ. ಯು. ಅಚ್ಚಣ್ಣ,
ಏಜೆನ್ಸಿ ಸೂಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.

ಅಥವಾ

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಪತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳಪಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳಪಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಿಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಮೇಲೆ ಹೊತ್ತು ದೊಯುವದು)

ಎಂ. ಎಸ್. ಸೋಮಯ್ಯ,
52–27 ಗೌರವ ಕಾರ್ಯದರ್ಶಿ.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ್ದವಾರ್ಷಿಕ ಪರದಿಯ ಪ್ರಾವುಖ್ಯಾಂಶಗಳು.

ಹೊಸ ಉದ್ಯಮ ರೂ. .... 6,13,00,000 ಮೀರಿದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಅಂಗ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ. ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ರೋಡ್, ಫೋರ್ಟ್, ಬೊಂಬಿ. ಕೆಂಪೇಗೌಡರಸ್ತೆ, ಬೆಂಗಳೂರು.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.* or The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಭದ್ರತೆ! 17 ವರ್ಷಗಳ [illegible] ಅನುಕೂಲತೆ !!
ಅನುಭವೆಶೀಲರು.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಜೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ

ಶಾಖೆಗಳು:— ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	53,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸ್ಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನೆ ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ, M. L. C.
ಗೌ. ಕಾರ್ಯದರ್ಶಿ, ಪ್ರಸಿಡೆಂಟ್ ಮತ್ತು ಮೆನೇಜರ್.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು"
ಏಜಂಟರು, ವೀರಾಜಪೇಟೆ.

Edited, Printed and Published by P. I. Belliappa at 'Kodagu Press, Mercara, for 'Kodagu' Ltd.